
ಕಲ್ಯಾಣ ಕಿರಣ

ನವೆಂಬರ್ - 2001 ಬೆಲೆ : ರೂ. 5-00





ಬಸವ ತತ್ತ್ವ ಸಮಾವೇಶ ಉದ್ಘಾಟನೆ, ಬೆಲ್ಜಿಯಂ ದೇಶದ ಜೀನ್ ಲೆಷರ್ಟ್ ಅವರಿಂದ. ಬಲದಿಂದ ಎಡಕ್ಕೆ- ಡಾ|| ವೀರಪ್ಪ, ಡಾ|| ಎಂ.ಸಿ. ಮೋದಿ, ಪೂಜ್ಯ ಶ್ರೀ ಮಾತಾಜಿ, ಪೂಜ್ಯ ಶ್ರೀ ಗಂಗಾ ಮಾತಾಜಿ

ಓಂ ಶ್ರೀ ಗುರುಬಸವಲಿಂಗಾಯ ನಮಃ

86666

ಸಂಪುಟ 31	ಬಸವ ಶಕೆ 868	ಆಜೀವ ಸದಸ್ಯತ್ವ 500 ರೂ.
ಸಂಚಿಕೆ 11	ನವೆಂಬರ್ 2001	ವಾರ್ಷಿಕ ಚಂದಾ 50/- ರೂ.

ಚತುರ್ವಿಧ ಸಾರಾಯ

ಸಾರಾಯ ಚತುರ್ವಿಧವನಾರೈದು ನೋಡಿ ಗುರು
ಕಾರುಣ್ಯದಿಂದ ಮಾಡುವುದುಚಿತವು || ಪಲ್ಲವಿ ||
ಗುರುಚರಣಕಮಲಕ್ಕೆ ಹರುಷ ದಯಚಿತ್ತದಿಂ
ಶರೀರಮರ್ಥಂ ಚ ಪ್ರಾಣಂಗಳ ||
ಕರಣಸಂತತಿಗಳನು ಹರಕರಿಸಲೀಯದೆ
ಪರಿಣಮಿಸಿ ಮಾಡೆ ಗುರುಭಕ್ತಿ ನೋಡಾ || 1 ||
ಶಿವಲಿಂಗದಲ್ಲಿ ತನ್ನವಯವವ ಬೆರಸಿ ಮಾ
ಡುವ ನಿತ್ಯ ನಿಯತ ವ್ರತ ನೇಮಂಗಳ ||
ಸವೆಯಲೀಯದೆ ಪೂರವಿಸಿ ಮಾಡಲಿಕೆ ಸಂ
ಭವಿಸುವುದು ಶಿವಲಿಂಗನಿಷ್ಠೆ ನೋಡಾ || 2 ||
ಹರನ ವೇಷವನೊಲಿದು ಧರಿಸಿಪ್ಪ ಜಂಗಮಕಾ
ದರದಿಂದ ವಸ್ತ್ರಾನ್ನಪಾನಂಗಳ ||
ಭರದಿಂದಲಿತ್ತವರವರ ತೃಪ್ತಿಬಡಿಸಿ ಸಂ
ವರಿಸುವುದು ಜಂಗಮಪ್ರೇಮ ನೋಡಾ || 3 ||
ಅಸಮಾಕ್ಷಲಿಂಗಕ್ಕೆ ಸ್ವಶರೀರವಿಡಿದು ಭಾ
ವಿಸಿ ಬಂದ ಸಕಲ ಸುಪದಾರ್ಥಂಗಳ ||
ಸಸಿನಗೆಯ್ದಲ್ಲಿ ಯೋಚಿಸಿಯರ್ಪಿಸುತ್ತ ಭೋ
ಗಿಸುವಲ್ಲಿ ಪ್ರಸಾದನಿಷ್ಠೆ ನೋಡಾ || 4 ||
ಗುರುಸದಾಚಾರದಲ್ಲಿ ಹರ ಮನ ಚಿತ್ತದಲಿ
ವರಪ್ರಸಾದವು ಶುದ್ಧ ದೇಹದಲ್ಲಿ ||
ಪರಿಣಾಮ ಜಂಗಮ ಸ್ಥಿರ ಹೇಮದಲ್ಲಿ ನೆಲ
ಸಿರಲು ಚಾತುಷ್ಟಯದ ಒಲವು ನೋಡಾ || 5 ||
ತನುವ ಕಳೆಯಲಿಕೆ ಗುರು ಭ್ರಮೆಯ ಕಳೆಯಲಿಕೆ ಲಿಂಗ
ಅಮಲ ದೇಹವ ಮಾಳ್ಪ ಪ್ರಸಾದವು ||
ಸುಮನ ಸುಜ್ಞಾನ ಮುಖವಪ್ಪ ಜಂಗಮಕೆ
ಕ್ರಮವರಿದು ಮಾಡೆ ಸದ್ಭಕ್ತಿ ನೋಡಾ || 6 ||
ಸುಲಭದೀ ಚತುರ್ವಿಧದ ಹೊಲಬ ನೋಡಿಯೆ ತಿಳಿದು
ಕೆಲಬಲಕೆ ಹರಿಯಲೀಯದೆ ಅರ್ಪಿಸೆ
ಕುಲದೀಶ ಕೂಡಲಚನ್ನಸಂಗನೋರಂತೆ
ನೆಲಸಿಪ್ಪನಂತರಂಗದಲಿ ನೋಡಾ || 7 ||

- ಚನ್ನಯಜ್ಞಾನಿ ಚನ್ನಬಸವಣ್ಣನವರು

ಕಲ್ಯಾಣ ಕಿರಣ

ಸಂಪುಟ 31 | ಬಸವ ಶಕೆ 868 | ಆಜೀವ ಸದಸ್ಯತ್ವ 500 ರೂ.
ಸಂಚಿಕೆ 11 | ನವೆಂಬರ್ 2001 | ವಾರ್ಷಿಕ ಚಂದಾ 50/- ರೂ.

ಲೇಖನಗಳು — ಕಿರಣಗನ್ನಡಿ

ಕಲ್ಯಾಣ ಕಿರಣದ ಮುಖಪುಟ : ಚಿನ್ಮಯಜ್ಞಾನಿ ಚನ್ನಬಸವಣ್ಣನವರು.
ನಾಲ್ಕನೆಯ ರಕ್ಷಾಪುಟ : ಬೆಂಗಳೂರಿನಲ್ಲಿ ಬಸವ ತತ್ತ್ವ ಸಮಾವೇಶ

ಶರಣ ವ್ರತ ಸ್ವೀಕಾರದ ದಿನಗಳು

1. ಗುರು ಸಾರಾಯ ಸಂಪದ್ ವ್ರತ	: 40 ದಿವಸಗಳ ವ್ರತ	: ಡಿಸೆಂಬರ್ 6
2. ಲಿಂಗ ಸಾರಾಯ ಸಂಪದ್ ವ್ರತ	: 30 ದಿವಸಗಳ ವ್ರತ	: ಡಿಸೆಂಬರ್ 16
3. ಜಂಗಮ ಸಾರಾಯ ಸಂಪದ್ ವ್ರತ	: 20 ದಿವಸಗಳ ವ್ರತ	: ಡಿಸೆಂಬರ್ 26
4. ಪ್ರಸಾದ ಸಾರಾಯ ಸಂಪದ್ ವ್ರತ	: 10 ದಿವಸಗಳ ವ್ರತ	: ಜನವರಿ 5

★ ವೆಬ್ ಸೈಟ್‌ನಲ್ಲಿ ಕಲ್ಯಾಣಕಿರಣ ★

ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ಜಗತ್ತಿನ ಯಾವುದೇ ಮೂಲೆಯಲ್ಲಿ ವೆಬ್‌ಸೈಟ್ ಮೂಲಕ ಕಂಪ್ಯೂಟರ್ ತೆರೆಯಮೇಲೆ ಓದಬಹುದು. ಸಂಪರ್ಕ ಸೂತ್ರ ಹೀಗಿದೆ :

www.Lingayathism.com

ವಿದೇಶಗಳಲ್ಲಿರುವ, ಭಾರತದ ವಿವಿಧ ಕಡೆ ಇರುವ ನಿಮ್ಮ ಪರಿಚಿತರು, ಬಂಧು ಮಿತ್ರರಿಗೆ ತಿಳಿಸಿರಿ.

KALYAN KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ : ಬಸವ ಮಂಟಪ, 2035
ದೂರವಾಣಿ : 3325335/33227990 — 20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ರಮೇಶ್ ಲಿಂಗಾಯತ

ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು (ಕ್ರಿ.ಶ. 1172-1196)

ಸಮತಾವಾದಿ, ಮಾನವತಾವಾದಿ, ವಿಶ್ವಧರ್ಮಿ, ಕ್ರಾಂತಿಪುರುಷ ಬಸವಣ್ಣನವರ (ಕ್ರಿ.ಶ. 1134-1196) ಸಹೋದರಿ ವೀರಮಾತೆ ಅಕ್ಕನಾಗಲಾಂಬಿಕೆ ಮತ್ತು ಶಿವಸ್ವಾಮಿಯವರ ಮಗನಾಗಿ ಚನ್ನಬಸವಣ್ಣನವರು ನಂದನ ನಾಮ ಸಂವತ್ಸರದ (1172) ಕಾರ್ತಿಕ ಶುದ್ಧ ಪ್ರತಿಪದೆಯಂದು ಜನಿಸಿದರು. ವಿಶ್ವಗುರು ಬಸವಣ್ಣನವರ ಕರಕಮಲ ಸಂಜಾತರಾದ ಶಿಷ್ಯರಾಗಿ ''ಇಂದೇ ಹುಟ್ಟಿದ ಕೂಸಿಂಗೆ ಇಂದೇ ಯೌವನವಾಯಿತ್ತು'' ಎಂದು ಸ್ವತಃ ಗುರು ಬಸವಣ್ಣನವರೇ ಆಶ್ಚರ್ಯಪಡುವಂತಹ ತ್ವರಿತ ಪ್ರಗತಿ ಅವರದು. ಕ್ರೋಧಿ ನಾಮ ಸಂವತ್ಸರ (1184)ದಲ್ಲಿ ಅನುಭವ ಮಂಟಪಕ್ಕೆ ಆಗಮಿಸಿದ ವ್ಯೋಮಕಾಯ ಸಿದ್ಧ ಅಲ್ಲಮಪ್ರಭುದೇವರ ಜೊತೆಗೂಡಿ ಬಂದ ಸೊನ್ನಲಾಪುರದ ಕರ್ಮಯೋಗಿ ಸಿದ್ಧರಾಮೇಶ್ವರರಿಗೆ ಇಷ್ಟಲಿಂಗಾನುಗ್ರಹ ದೀಕ್ಷೆ ನೀಡಿ ಲಿಂಗಾಂಗ ಯೋಗಿಯನ್ನಾಗಿ ಮಾಡಿದ ಕೀರ್ತಿ ಚನ್ನಬಸವಣ್ಣನವರದು. ತಮ್ಮ ಆಳವಾದ ಅಧ್ಯಾತ್ಮಿಕ ಸಾಧನೆ, ಅಸಾಮಾನ್ಯ ಪಾಂಡಿತ್ಯ, ಅದ್ಭುತ ಪ್ರತಿಭೆಗಳಿಂದ ದಾರ್ಶನಿಕ ದಿಗ್ಗಜರಾಗಿ ಬೆಳೆದ ಚನ್ನಬಸವಣ್ಣನವರು ಷಟಸ್ಥಲ ಚಕ್ರವರ್ತಿ ಎಂಬ ಬಿರುದನ್ನು ಪಡೆದರು.

ಅನುಭವ ಮಂಟಪದಲ್ಲಿ ರೂಪುಗೊಂಡ ವಚನ ಸಾಹಿತ್ಯವೆಂಬ ಅನುಭಾವ ಸಾಹಿತ್ಯಕ್ಕೆ ತಾತ್ತ್ವಿಕವಾಗಿ ಷಟಸ್ಥಲದ ಚೌಕಟ್ಟನ್ನು ಕೊಟ್ಟ ಮಹಾಜ್ಞಾನಿ ಚನ್ನಬಸವಣ್ಣನವರು. ''ಜಾತಿಯಿಂದ ಗುರುತ್ವ ಬರದು, ಆತ್ಮಜ್ಯೋತಿಯಿಂದ ಮಾತ್ರ'' ಎಂಬ ತಮ್ಮ ಸಿದ್ಧಾಂತವನ್ನು ಅನುಷ್ಠಾನಿಸಲು ವಿಶ್ವಗುರು ಬಸವಣ್ಣನವರು ಶೂನ್ಯ ಪೀಠವನ್ನು ರಚಿಸಿ ಸೂಕ್ತ ವ್ಯಕ್ತಿಯ ಬರುವಿಗಾಗಿ ನಿರೀಕ್ಷಿಸುವಾಗ ಅಲ್ಲಮಪ್ರಭುಗಳು ಆಗಮಿಸಿದಾಗ ಧರ್ಮಪಿತ ಬಸವಣ್ಣನವರು ಹರ್ಷಮುಖಿಗಳಾದರು. ವಿಶ್ವಾವಸು ಸಂವತ್ಸರದ (1185) ಚೈತ್ರ ಶುದ್ಧ ಪಾಡ್ಯ ಯುಗಾದಿ ದಿವಸ ಸೋಮವಾರದಂದು ರೇವತಿ ನಕ್ಷತ್ರದಲ್ಲಿ ಪ್ರಭುದೇವರ ಪೀಠಾರೋಹಣವು ನೆರವೇರಿತು. ಇಂಥ ಶೂನ್ಯ ಪೀಠದ ಅಧ್ಯಕ್ಷರಾಗಿ ವಿಶ್ವಾವಸು ಸಂವತ್ಸರ (1185)ದಿಂದ ರಾಕ್ಷಸನಾಮ ಸಂವತ್ಸರ (1195)ದವರೆಗೆ ಅಲ್ಲಮಪ್ರಭುಗಳು ಇದ್ದು ನಂತರ ಪೀಠಾಧಿಕಾರವನ್ನು ರಾಕ್ಷಸನಾಮ ಸಂವತ್ಸರದ ಕಾರ್ತಿಕ ಶುದ್ಧ ಪಂಚಮಿಯಂದು ಚನ್ನಬಸವಣ್ಣನವರಿಗೆ ವಹಿಸಿಕೊಟ್ಟರು.

ಧರ್ಮಪಿತ ಬಸವಣ್ಣನವರು ಸಂಸ್ಥಾಪಿಸಿದ ಲಿಂಗಾಯತ ಧರ್ಮದ ಸಮಾನತೆಯನ್ನು ಕೃತಿಗಿಳಿಸುವ ಸಾಧನವಾಗಿ ಹುಟ್ಟಿನಿಂದ ಬ್ರಾಹ್ಮಣರಾಗಿ ಶರಣ ಧರ್ಮ ಸ್ವೀಕರಿಸಿದ್ದ ಮಧುವರಸರ ಮಗಳು ಲಾವಣ್ಯವತಿಯನ್ನು ಹುಟ್ಟಿನಿಂದ ಸಮಗಾರರಾಗಿ ಶರಣಧರ್ಮ ಸ್ವೀಕರಿಸಿದ್ದ ಹರಳಯ್ಯನವರ ಮಗ ಶೀಲವಂತನಿಗೆ ಕೊಟ್ಟು ವಿವಾಹವನ್ನು ನೆರವೇರಿಸಿದಾಗ ಸಂಪ್ರದಾಯವಾದಿಗಳು ಸಿಡಿದೆದ್ದು ಸ್ವತಂತ್ರ ವಿಚಾರವಾದಿಯಲ್ಲದ ಬಿಜ್ಜಳನನ್ನು ಪ್ರಚೋದಿಸಿ ಧರ್ಮಗುರು ಬಸವಣ್ಣನವರ ಗಡಿಪಾರು ಮಾಡಿಸಿದರು. ರಾಕ್ಷಸನಾಮ ಸಂವತ್ಸರದ (1195) ಫಾಲ್ಗುಣ ಮಾಸದ ದ್ವಾದಶಿ ಸೋಮವಾರದಂದು ಧರ್ಮಪಿತ ಬಸವಣ್ಣನವರು ಕಲ್ಯಾಣದಿಂದ ನಿರ್ಗಮಿಸಿದರು. ಚತುರ್ದಶಿಯಂದು ವಿವಾಹದಲ್ಲಿ ಭಾಗಿಗಳಾದ ಹರಳಯ್ಯ -ಮಧುವರಸ-ಶೀಲವಂತರನ್ನು ಆನೆ ಕಾಲಿಗೆ ಕಟ್ಟಿ ಎಳೆಸಿ ಕೊಲ್ಲಲಾಯಿತು. ಜಾತಿವಾದಿಗಳು ವಚನ ಸಾಹಿತ್ಯವನ್ನು ನಾಶಮಾಡುವ ಸಂಚು ಹೂಡಿದಾಗ ಚಿನ್ಮಯಜ್ಞಾನಿ ಚನ್ನಬಸವಣ್ಣನವರು, ವೀರಮಾತೆ ಅಕ್ಕನಾಗಲಾಂಬಿಕೆ, ವೀರಶರಣ ಮಡಿವಾಳ ಮಾಚಿದೇವರು ವಚನ ಸಾಹಿತ್ಯವನ್ನು ಸಹ್ಯಾದ್ರಿಯ ದುರ್ಗಮ ಅರಣ್ಯಕ್ಕೆ ಒಯ್ದು ಗುಹೆಗಳಲ್ಲಿಟ್ಟು ರಕ್ಷಿಸಿದರು ; ವಚನ ವಾಙ್ಮಯ ರಕ್ಷಣೆಗಾಗಿ ಖಡ್ಗ ಹಿಡಿದು ಹೋರಾಡಿದರು. ಕೇವಲ 24 ವರ್ಷ ಕಾಲ ಇಳೆಯ ಮೇಲಿದ್ದು ಚನ್ನಬಸವಣ್ಣನವರು ನಳನಾಮ ಸಂವತ್ಸರದ ಕಾರ್ತಿಕ ಹುಣ್ಣಿಮೆಯಂದು ಉಳಿವೆಯಲ್ಲಿ ಲಿಂಗೈಕ್ಯರಾದರು. ಇದೇ ಕಾರ್ತಿಕ ಪಾಡ್ಯ (ನವೆಂಬರ್ 16, 2001)ಕ್ಕೆ ಚನ್ನಬಸವಣ್ಣನವರು ಹುಟ್ಟಿ 830 ವರ್ಷಗಳಾಗುವ ಕಾರಣ ಅವರ 830ನೆಯ ಜಯಂತಿಯನ್ನು ಆಚರಿಸಲಾಗುತ್ತಿದೆ.




ಧರ್ಮಗುರು ಬಸವಣ್ಣ

ಓಂ ಶ್ರೀ ಗುರುಬಸವಲಿಂಗಾಯ ನಮಃ
86666

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಹದಿನೈದನೆಯ

ಶರಣ ಮೇಳ



ಗಣ ಧ್ವಜ

2002ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಕತ್ತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988 ಜನವರಿ 14, 15 ರಿಂದ 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹದಿನೈದನೆಯ ಶರಣ ಮೇಳವು 2002ರ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ , ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ' ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ. ದಿ. 11 ಮತ್ತು 12ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ - ಧರ್ಮಗಳಿಗೆ ಸಂಬಂಧಪಟ್ಟಂತೆ

ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬನ್ನಿರಿ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ(ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1.ಮಹಾಪೋಷಕರು	:5000ರೂ.ಮತ್ತು ಮೇಲೆ ಕೊಟ್ಟವರು.	4. ಹಿತೈಷಿಗಳು	: 500ರೂ
2.ಪೋಷಕರು	:2000ರೂ.ಮತ್ತು ಮೇಲೆ ಕೊಟ್ಟವರು.	5. ಸ್ವಾಗತ ಸಮಿತಿ ಸದಸ್ಯತ್ವ	: 250ರೂ
3.ದಾನಿಗಳು	:1000ರೂ.ಮತ್ತು ಮೇಲೆ ಕೊಟ್ಟವರು.	6. ಪ್ರತಿನಿಧಿ ಶುಲ್ಕ:	: 150ರೂ

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ - ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ.ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಸಂಪರ್ಕಿಸುವ ವಿಳಾಸಗಳು :

ಬೆಂಗಳೂರು ವಿಳಾಸ :
ಶರಣ ಮೇಳ ಉತ್ಸವ ಸಮಿತಿ(ರಿ)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು- 560010
ದೂರವಾಣಿ: 080-3325335/ 3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ - 587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂರವಾಣಿ : 08351-58038/58007

ಮುಸಲ್ಮಾನ್ ಧರ್ಮಿಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗೆಯ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನು-ಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ(ಜನವರಿ 14ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ವಿಶೇಷ ಮನವಿ:

ಶರಣ ಬಂಧುಗಳೇ, ಕರ್ನಾಟಕ ರಾಜ್ಯ ಈ ವರ್ಷ ಮಳೆಯ ಕೊರತೆಯಿಂದಾಗಿ ಬರಗಾಲವನ್ನು ಎದುರಿಸುತ್ತಿದೆ. ಮಳೆಯ ಆಶ್ರಯದಲ್ಲಿ ವ್ಯವಸಾಯ ಮಾಡುವವರು, ಕೃಷಿಯ ಕೂಲಿಯನ್ನು ಅವಲಂಬಿಸಿರುವವರು ಭಯಂಕರ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಶ್ರೀಮಂತರು, ಕಾಯಂ ಉದ್ಯೋಗಿಗಳು, ನೀರಾವರಿ ಕೃಷಿಯು ಅನುಕೂಲತೆಯುಳ್ಳವರು, ಸರ್ಕಾರಿ ಉದ್ಯೋಗಿಗಳು ಹೆಚ್ಚಿನ ಪ್ರಮಾಣದಲ್ಲಿ ಅನ್ನ ದಾಸೋಹಕ್ಕೆ ತಮ್ಮ ಕಾಣಿಕೆಯನ್ನು ಸ್ವಯಂ ಪ್ರೇರಣೆಯಿಂದ ನೀಡಿ ಶರಣ ಮೇಳದ ಯಶಸ್ಸಿಗೆ ಸಹಕರಿಸಬೇಕೆಂದು ಕೋರುತ್ತೇವೆ.

ಬಸವ(ಲಿಂಗಾಯತ) ಧರ್ಮದ ಆರು ಸೂತ್ರಗಳು

1.ಧರ್ಮಗುರು	-	ವಿಶ್ವಗುರು ಬಸವಣ್ಣನವರು
2.ಧರ್ಮ ಸಂಹಿತೆ	-	ಸಮಾನತೆ ಸಾರುವ ವಚನ ಸಾಹಿತ್ಯ
3.ಧರ್ಮ ಲಾಂಛನ	-	ವಿಶ್ವಾತ್ಮನ ಕುರುಹಾದ ಇಷ್ಟಲಿಂಗ
4.ಧರ್ಮ ಕ್ಷೇತ್ರ	-	ಗುರು ಬಸವಣ್ಣನವರ ಐಕ್ಯಕ್ಷೇತ್ರ, ಕೂಡಲಸಂಗಮ
5.ಧರ್ಮಧ್ವಜ	-	ಷಟ್ಕೋನ ಸಹಿತ ಬಸವ ಧ್ವಜ
6.ಧರ್ಮದ ಧ್ಯೇಯ	-	ಜಾತಿವರ್ಣವರ್ಗ ರಹಿತ, ಧರ್ಮಸಹಿತ (ಶರಣ ಸಮಾಜ) ಕಲ್ಯಾಣ ರಾಜ್ಯ ನಿರ್ಮಾಣ.



ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ॥



ಶರಣ ವ್ರತ ಸ್ವೀಕಾರ

-ಮಾತಾಜಿ

ಸಿಖ್ ಧರ್ಮದ ಖಾಲ್ಸಾ, ಇಸ್ಲಾಂ ಧರ್ಮದ ಹಜ್‌ದಿಂದ ಪ್ರೇರಿತರಾಗಿ, ಪಂಢರಾಪುರದ ವಾರಕರಿಯ ದಿಂಡಿ ಉತ್ಸವ, ಶಬರಿ ಮಲೈದ ಅಯ್ಯಪ್ಪಸ್ವಾಮಿ ಭಕ್ತಿಪಂಥದ ಆಚರಣೆಗಳಿಂದ ಸ್ಫೂರ್ತಿ ಪಡೆದು ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಧರ್ಮಕ್ಷೇತ್ರವೆಂದು ಗುರುತಿಸಿಕೊಂಡು 1988ರಲ್ಲಿ ಮೊಟ್ಟ ಮೊದಲ ಶರಣ ಮೇಳವನ್ನು ನಡೆಸಲಾಯಿತು. ಇದು ವಿಶ್ವಗುರು ಬಸವಣ್ಣನವರೇ ಆದಿಯಾಗಿ ಶರಣ ಪುಂಗವರೆಲ್ಲರ ಅಪೇಕ್ಷೆ ಮತ್ತು ಸಂಕಲ್ಪ ಎಂಬುದು ನಮಗೆಲ್ಲ ಮನದಟ್ಟಾಗಿದೆ. ಧರ್ಮಪಿತ ಬಸವಣ್ಣನವರು ಅವರ ಕಾಲದಲ್ಲಿಯೇ ಆಗಾಗ ಗಣಪರ್ವಗಳನ್ನು ನಡೆಸಿ ಶರಣರನ್ನು ಒಂದೆಡೆಯಲ್ಲಿ ಸಮಾವೇಶಗೊಳಿಸುತ್ತಿದ್ದರು. ಇದಕ್ಕೆ ಅಂಗ, ವಂಗ, ಕಳಿಂಗ, ಗುರ್ಜರ ದೇಶಗಳಿಂದೆಲ್ಲ ಭಕ್ತರು ಬರುತ್ತಿದ್ದರು ಎಂಬುದನ್ನು ಹರಿಹರ ಮಹಾಕವಿ, ಸಿಂಗಿರಾಜ ಮುಂತಾದವರು ಬಣ್ಣಿಸಿದ್ದಾರೆ.

ಮಡಿವಾಳ ಮಾಚಿದೇವರು ಕಾಲಜ್ಞಾನ ವಚನದಲ್ಲಿ ಹೀಗೆ ಹೇಳುತ್ತಾರೆ.

೧. ದಕ್ಷಿಣದ ಕೃಷ್ಣೆಗೆ ಕರೆವರೈಯ್ಯ ಜನ ನೆರೆವರಯ್ಯ

೨. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
ಜರಿಯಲು ಬೇಡ, ಅರಿದು ನೋಡುವುದು
ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು

೩. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು.

ಪರಿಧಾವಿ ಸಂವತ್ಸರವು ಕ್ರಿ.ಶ. 2032ಕ್ಕೆ ಬರುವುದು. ಈಗ ನಾವು ಎಷ್ಟೇ ಕಳಕಳಿಯಿಂದ ನಿಷ್ಕಲ್ಮಶ ಮನಸ್ಸಿನಿಂದ ಕರೆದರೂ ಲಿಂಗಾಯತರು ಎಲ್ಲರೂ ಒಟ್ಟಾಗಿ ಸೇರದೆ, ಶರಣ ಮೇಳಕ್ಕೆ ಬರದೆ ಗುಂಪುಗುಂಪಾಗಿ ಇರುವರು. ಆದರೆ ಆದಿ ಶರಣರ ಸಂಕಲ್ಪ, ನಮ್ಮ ಆಶಯ ಖಂಡಿತ ವ್ಯರ್ಥವಾಗದು. ಈ ಎಲ್ಲ ಭೇದಗಳು ಅಳಿದು ಕ್ರಿ.ಶ. 2032ರ ಸುಮಾರಿಗೆ (ನಾವು ಅಷ್ಟು ಕಾಲ ಬದುಕಿರದೆ ಇದ್ದರೂ) ಎಲ್ಲ ಬಸವ ಭಕ್ತರು, ಲಿಂಗಾಯತರು ಶರಣ ಮೇಳಕ್ಕೆ, ಧರ್ಮಕ್ಷೇತ್ರ ಕೂಡಲ ಸಂಗಮಕ್ಕೆ ಬರಲು ಆರಂಭಿಸುವರು. ಇದು ಮಾಚಿದೇವರ ವಾಣಿ.

ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಜನವರಿ 11ರಿಂದ ೧೪ರವರೆಗೆ ಶರಣ ಮೇಳವು 1988 ರಿಂದಲೂ ನಡೆಯುತ್ತ ಬರುತ್ತಿದ್ದು 2001 ಇಸವಿಗೆ 14ನೆಯ ಶರಣ ಮೇಳ ಒದಗಿ ಬಂದಿದೆ. ಕೇವಲ ಯಾಂತ್ರಿಕವಾಗಿ ಬಂದು ಹೋಗುವ ಪರಿಪಾಠಕ್ಕಿಂತಲೂ 'ಶರಣ ವ್ರತ'ವನ್ನು ಸ್ವೀಕಾರ ಮಾಡಿ ಬರುವ ಪರಿಪಾಠವು ಅತ್ಯುತ್ತಮ. ಈಗಾಗಲೇ 3-4 ವರ್ಷಗಳಿಂದ ಕೆಲವರು ಶರಣ ವ್ರತಧಾರಿಗಳಾಗಿ ಬರುತ್ತಲಿದ್ದಾರೆ. ಈಗ ನಾವು ಇದಕ್ಕೆ ನಿರ್ದಿಷ್ಟ ರೂಪ ಕೊಡಬೇಕಲ್ಲದೆ, ಹೆಚ್ಚಿನ ಸಂಖ್ಯೆಯಲ್ಲಿ ಶರಣ ವ್ರತಿಗಳು ವ್ರತ ಸ್ವೀಕಾರ ಮಾಡುವುದಕ್ಕೆ ಒತ್ತು ಕೊಡಬೇಕು. ಇದಕ್ಕಾಗಿ ಕೆಲವು ನಿಯಮಾವಳಿ ಸೂಚಿಸಲಾಗಿದೆ.

ಜನವರಿ 14ರಂದು ಬೆಳಿಗ್ಗೆ ಗಣಲಿಂಗ ದರ್ಶನ ಪಡೆಯುವುದು, 11ರಿಂದ 2ರವರೆಗೆ ನಡೆಯುವ ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು, ಸಂಜೆ ನಡೆಯುವ ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಪಾಲ್ಗೊಳ್ಳುವ ಕ್ರಿಯೆಯಿಂದ ಆ ವರ್ಷದ ವ್ರತ ಪೂರ್ತಿಯಾಗುತ್ತದೆ. ಈ ದಿನಾಂಕಕ್ಕೆ ಪೂರ್ವಭಾವಿಯಾಗಿ 10,20,30,40 ದಿವಸಗಳ ವ್ರತವನ್ನು ಶರಣ ಬಂಧುಗಳು ಕೈಗೊಳ್ಳಬೇಕು.

೧. ಗುರು ಸಾರಾಯ ಸಂಪದ್ ವ್ರತ : 40 ದಿವಸಗಳ ವ್ರತ ; ಡಿಸೆಂಬರ್ 6ರಂದು ಪ್ರಾರಂಭ

೨. ಲಿಂಗ ಸಾರಾಯ ಸಂಪದ್ ವ್ರತ : 30 ದಿವಸಗಳ ವ್ರತ ; ಡಿಸೆಂಬರ್ 16ರಂದು ಪ್ರಾರಂಭ

೩. ಜಂಗಮ ಸಾರಾಯ ಸಂಪದ್ ವ್ರತ : 20 ದಿವಸಗಳ ವ್ರತ ; ಡಿಸೆಂಬರ್ 26ರಂದು ಪ್ರಾರಂಭ.

೪. ಪ್ರಸಾದ ಸಾರಾಯ ಸಂಪದ್ ವ್ರತ : 10 ದಿವಸಗಳ ವ್ರತ ; ಜನವರಿ 5ರಂದು ಪ್ರಾರಂಭ.

ಈ ನಾಲ್ಕು ಅವಧಿಯ ವ್ರತಗಳಲ್ಲಿ ಯಾವುದನ್ನೇ ಆಯ್ದುಕೊಂಡರೂ ಶರಣ-ಶರಣೆಯರು, ಮಕ್ಕಳು-ಮುದುಕರು ಯಾರೇ ಇರಲಿ ಮುಂದೆ ತಿಳಿಸುವ ನೇಮಗಳನ್ನು ನಡೆಸಬೇಕು.

೧. ಬಿಳಿಯ ವಸ್ತ್ರಗಳನ್ನು ಧರಿಸಬೇಕು. ವ್ರತದ ಅವಧಿಯಲ್ಲಿ ಶರಣರಿರಲಿ, ಶರಣೆಯರೇ ಇರಲಿ ಬಿಳಿಯ ವಸ್ತ್ರಗಳನ್ನು ಧರಿಸಿರಬೇಕು, ಕಾಲಲ್ಲಿ ಚಪ್ಪಲಿ ಧರಿಸುವುದನ್ನು ತೊರೆಯಬೇಕಾಗಿಲ್ಲ. ಚಪ್ಪಲಿ ತೊಡುವುದರಿಂದ ಕಾಲಿಗೆ ರಕ್ಷೆ ಇರುತ್ತದೆ. ಚಪ್ಪಲಿ ಮೈಲಿಗೆ ಎಂಬ ತಪ್ಪು ತಿಳುವಳಿಕೆಯಿಂದ ಯಾರೋ ಬೇರೆ ವ್ರತಗಳವರನ್ನು ನೋಡಿ ಚಪ್ಪಲಿ ತೊಡುವುದನ್ನು ಬಿಡಬೇಕಾಗಿಲ್ಲ.

೨. ಪೂಜೆ-ಪಠಣ ಮಾಡುವಾಗ ಬಿಳಿಯ ವಸ್ತ್ರದ ಮೇಲೆ ಕಾವಿಯ ಸ್ಕಾರ್ಫನ್ನು ಕಡ್ಡಾಯವಾಗಿ ಧರಿಸಬೇಕು.

೩. ಶರಣರು ತಲೆಯ ಮೇಲೆ ಷಟ್ಕೋನದ ಟೋಪಿ ಧರಿಸಿರಬೇಕು.

೪. ಬೆಳಗ್ಗೆ-ಸಂಜೆ ಎರಡೂ ಹೊತ್ತು ಸ್ನಾನ ಮಾಡಬೇಕು. ಲಿಂಗಾಯತರು, ಇಷ್ಟಲಿಂಗಾರ್ಚನೆ, ಗುರು ಬಸವಾರ್ಚನೆ ಮಾಡಬೇಕು. ಲಿಂಗಾಯತೇತರರ ಬಸವ ಭಕ್ತರು ಗುರು ಬಸವಾರ್ಚನೆ ಮಾಡಬೇಕು.

೫. ಎರಡೂ ಹೊತ್ತು ವಚನ ಪಠಣ ಮಾಡಬೇಕು. ಬೆಳಗ್ಗೆ 108 ವಚನ ಸಂಜೆ 108 ವಚನ ಪಠಿಸಬೇಕು. ಓದಲು ಬರದ ಅವಿದ್ಯಾವಂತರು 'ಓಂ ಶ್ರೀ ಗುರು ಬಸವಲಿಂಗಾಯ ನಮಃ' ಮಂತ್ರವನ್ನು ೧೦೮ರಂತೆ ಎರಡೂ ಹೊತ್ತು ಪಠಿಸಬಹುದು.

೬. ಸಂಜೆಯ ವೇಳೆಯಲ್ಲಿ ಶರಣ ವ್ರತಿಗಳೆಲ್ಲರು ಒಂದು ಸ್ಥಳದಲ್ಲಿ ಸಾಮೂಹಿಕವಾಗಿ ಸೇರಿ ನೆನಹು-ಸಂಕ್ಷಿಪ್ತ ಪ್ರಾರ್ಥನೆ ಮಾಡಿ, ವಚನ ಪಠಣ ಮಾಡಿ, ವಚನ ಲೇಖನವನ್ನು ಮಾಡಬೇಕು. ಪ್ರಾರ್ಥನೆ-ವಚನ ಪಠಣದ ನಂತರ, ಮೌನವಾಗಿ ವಚನ ಲೇಖನವನ್ನು ಕೈಗೊಳ್ಳಬೇಕು. ಬರೆಯಲು ಬರದವರು ಕನಿಷ್ಠ "ಓಂ ಶ್ರೀ ಗುರು ಬಸವಲಿಂಗಾಯ ನಮಃ" ಬರೆಯಲು ಕಲಿತು, ಅದೇ ಮಂತ್ರವನ್ನು ಬರೆಯಬೇಕು. ವಚನ ಲೇಖನ ಗ್ರಂಥವನ್ನು ಬರುವಾಗ ತಮ್ಮ ಜೊತೆಗೆ ತಂದು, ಪುನಃ ಮನೆಗೆ ಹೋಗುವಾಗ ಒಯ್ದು ಮನೆಯಲ್ಲೂ ಬರಹ ಮುಂದುವರಿಸಬಹುದು.

೭. ವ್ರತ ಕಾಲದಲ್ಲಿ ಕಾಯಕವನ್ನು ಬಿಡಬೇಕಾಗಿಲ್ಲ. ಇನ್ನೂ ನಿಷ್ಠೆಯಿಂದ ಮಾಡಬೇಕು.

೮. ಲಿಂಗಾಯತರು ಭಸ್ಮ, ರುದ್ರಾಕ್ಷಿ ಇಷ್ಟಲಿಂಗಗಳನ್ನು ಸದಾ ಧರಿಸಿರಬೇಕು, ಲಿಂಗಾಯತೇತರ ವ್ರತಧಾರಿಗಳು ಭಸ್ಮ-ರುದ್ರಾಕ್ಷಿಗಳನ್ನು ತಪ್ಪದೇ ಧರಿಸಿರಬೇಕು.

೯. ಸ್ತ್ರೀಯರು ಮುಟ್ಟು-ಮೈಲಿಗೆ ಮುಂತಾದ ಭ್ರಾಂತಿಗೆ ಒಳಗಾಗಬಾರದು.

೧೦. ವ್ರತದ ಅವಧಿಯಲ್ಲಿ ಧೂಮ್ರಪಾನ, ತಂಬಾಕು ಸೇವನೆ, ಮಾಂಸಾಹಾರ, ದಾಂಪತ್ಯ ಸುಖ ಪೂರ್ಣವಾಗಿ ವರ್ಜಿಸಬೇಕು, ಮದ್ಯಪಾನ ವ್ಯಸನಿಗಳು ಮತ್ತು ಮಾಂಸಾಹಾರಿಗಳು ವ್ರತದ ಅವಧಿಯ ನಂತರವೂ ಇವನ್ನು ಬಿಟ್ಟು ಶುದ್ಧಿಯನ್ನು ಕಾಯ್ದುಕೊಂಡರೆ ಉತ್ತಮ.

೧೧. ವ್ರತದ ಅವಧಿಯಲ್ಲಿ ಲಿಂಗಾಯತರು ಪ್ರತಿ ದಿವಸವೂ ಎರಡೂ ಹೊತ್ತು ಇಷ್ಟಲಿಂಗ ಪೂಜೆ ಮಾಡಿ, ನಂತರ ಗುರು ಬಸವಣ್ಣನವರ 108 ಸ್ತುತಿಗಳನ್ನು ಹೇಳಿ ಪೂಜಿಸಿ, ತದ ನಂತರ ವಚನ ಪಠಣ ಮತ್ತು ವಚನ ಲೇಖನ ವಿಧಿಯನ್ನು ಪೂರ್ಣಗೊಳಿಸಬೇಕು. ವ್ರತದ ಅವಧಿಯಲ್ಲಿ ಎಷ್ಟು

ಸೋಮವಾರ ಬರುತ್ತವೋ ಅಷ್ಟು ಸೋಮವಾರ ಅಥವಾ ಕಾಯಕ ಜೀವಿಗಳು ಸೋಮವಾರ ರಜೆ ಇಲ್ಲದಿರುವುದರಿಂದ ಭಾನುವಾರದಂದು ಬಸವೇಶ್ವರ ಪೂಜಾವ್ರತವನ್ನು ಪೂರ್ಣ ರೂಪದಲ್ಲಿ ಮಾಡಬೇಕು. ಲಿಂಗಾಯತೇತರರು ಇಷ್ಟಲಿಂಗ ದೀಕ್ಷೆ ಪಡೆದಿರದಿದ್ದರೆ, ಆಗ ದಿನನಿತ್ಯ ಗುರುಬಸವಾರ್ಚನೆ ಮಾಡಿ 108 ಬಸವ ಮಂತ್ರ ಪಠಣ ಮಾಡಬೇಕು. ವಾರಕ್ಕೊಮ್ಮೆ ಪೂರ್ತಿ ಪೂಜಾವ್ರತ ಮಾಡಬೇಕು. ವಚನ ಪಠಣ ಮತ್ತು ವಚನ ಲೇಖನಗಳನ್ನು ಕಡ್ಡಾಯವಾಗಿ ಮಾಡಬೇಕು.

೧೨. ರಾಷ್ಟ್ರೀಯ ಬಸವ ದಳಗಳು ಇದ್ದಲ್ಲಿ ಹೆಚ್ಚು ಹೆಚ್ಚು ಜನರನ್ನು ಅವರ ಸಮಯಾವಕಾಶಕ್ಕೆ ತಕ್ಕಂತೆ 10, 20, 30, 40 ದಿವಸಗಳ ಶರಣ ವ್ರತಿಗಳಾಗಲು ಪ್ರೇರೇಪಿಸಬೇಕು. ಕೂಡಲ ಸಂಗಮಕ್ಕೆ ಶರಣ ಮೇಳಕ್ಕೆ ಕರೆ ತರಬೇಕು. ಅಲ್ಲಿ ಅವರವರ ರಾಷ್ಟ್ರೀಯ ಬಸವ ದಳಗಳಿಂದ ಶರಣ ವ್ರತಧಾರಿಗಳ ಪಟ್ಟಿಯನ್ನು ಸಲ್ಲಿಸಬೇಕು. ಅತಿ ಹೆಚ್ಚಿನ ಶರಣ ವ್ರತಿಗಳನ್ನು ಕರೆತಂದ ರಾಷ್ಟ್ರೀಯ ಬಸವ ದಳಗಳಿಗೆ ಕ್ರಮವಾಗಿ ೩ ಬಹುಮಾನಗಳನ್ನು ಕೊಡಲಾಗುವುದು. ರಾಷ್ಟ್ರೀಯ ಬಸವ ದಳ ಇಲ್ಲದಿರುವಲ್ಲಿ ವೈಯಕ್ತಿಕವಾಗಿಯೇ ಶರಣ ಬಂಧುಗಳು ವ್ರತವನ್ನು ಧಾರಣೆ ಮಾಡಬಹುದು.

ಅದೇ ರೀತಿ, ಶರಣ ವ್ರತ ಸ್ವೀಕಾರ ಮಾಡದೆಯೂ ಕೇವಲ ವಚನ ಲೇಖನ ಮಾತ್ರ ಮಾಡುವವರನ್ನು ಪ್ರೇರೇಪಿಸಿ, ವಚನಗಳನ್ನು, ಬರೆಸಿ, ತಂದು ಸಮರ್ಪಿಸುವ ರಾಷ್ಟ್ರೀಯ ಬಸವ ದಳ ಅಥವಾ ಇನ್ನಿತರ ಧಾರ್ಮಿಕ ಸಂಸ್ಥೆಗಳಿಗೂ ಬಹುಮಾನ ಉಂಟು.

೧೩. ರಾಷ್ಟ್ರೀಯ ಬಸವ ದಳಗಳಲ್ಲಿ ಕ್ರಿಯಾ ಮೂರ್ತಿಗಳಿದ್ದರೆ ಅವರಿಂದ ಶರಣ ವ್ರತ ದೀಕ್ಷೆ ಪಡೆಯಬಹುದು. ಸಾಮಾನ್ಯವಾಗಿ ಮೊದಲೇ ಶರಣ ಬಂಧುಗಳು ಇಷ್ಟಲಿಂಗ, ರುದ್ರಾಕ್ಷಿ ಮಾಲೆ ಮುಂತಾಗಿ ಧರಿಸಿರುತ್ತಾರೆ. ಅಕಸ್ಮಾತ್ ರುದ್ರಾಕ್ಷಿ ಮಾಲೆಯನ್ನು ಮೊದಲೇ ಧರಿಸಿರದಿದ್ದರೆ ಶರಣ ವ್ರತದ ಕಾಲದಲ್ಲಿ ತಪ್ಪದೆ ಧರಿಸಬೇಕು. ರುದ್ರಾಕ್ಷಿ ಮಾಲೆ ಸಿಕ್ಕದೆ ಇದ್ದರೆ, ಅಥವಾ ಅದು ಬಹಳ ತುಟ್ಟಿ ಇರುವ ಕಾರಣ ಕಡೆಗೆ ಭದ್ರಾಕ್ಷಿ ಕಾಳಿನ ಸರವನ್ನಾದರೂ ಧರಿಸಬೇಕು.

ನಿಜವಾಗಿಯೂ ಹೇಳುವುದಾದರೆ ಬಸವ ಧರ್ಮದ ಪ್ರಕಾರ ಅವಧಿಯ ವ್ರತಗಳು ಇರದೆ, ಜೀವನವೇ ಒಂದು ವ್ರತವಾಗಬೇಕು. ಹತ್ತು ದಿನವೋ ಒಂದು ತಿಂಗಳೋ ವ್ರತ ಮಾಡಿ (ಅಯ್ಯಪ್ಪ ಸ್ವಾಮಿ ವ್ರತದಂತೆ) ಕಟ್ಟುನಿಟ್ಟಾದ ಆಚರಣೆ ನಡೆಸಿ, ಪುನಃ ಮೊದಲಿನಂತೆ ಇರುವುದು ನಿಜಕ್ಕೂ ಅರ್ಥರಹಿತ. ಶರಣನ ನಿತ್ಯ ನೇಮಗಳು ಸಹಜವಾಗಿದ್ದು ವರ್ಷ ಪೂರ್ತಿ, ಜೀವಮಾನಪೂರ್ತಿ ಒಂದೇ ರೀತಿ ಇರಬೇಕು. ಆದರೆ ಲಿಂಗಾಯತರು ಧರ್ಮಾಚರಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿಮುಖರಾಗುತ್ತ ಇಷ್ಟಲಿಂಗಧಾರಣೆ, ವಚನ ಸಾಹಿತ್ಯ ಅಧ್ಯಯನ ಮುಂತಾದುವನ್ನು ತೊರೆಯುತ್ತಲಿರುವುದರಿಂದಲೂ ಮತ್ತು ಅನ್ಯ ದೈವಗಳ ಪೂಜೆ-ವ್ರತಗಳತ್ತ ಒಂದು ಫ್ಯಾಶನ್ ಎಂಬಂತೆ ಆಕರ್ಷಿತರಾಗುತ್ತಿರುವುದರಿಂದಲೂ ಅವರಲ್ಲಿ ವಿಶೇಷ ಆಸಕ್ತಿ ಮೂಡಿಸಲೋಸುಗ ವಿಶಿಷ್ಟ ಅವಧಿಯ ವ್ರತಗಳನ್ನು ನಿರ್ದೇಶಿಸಲಾಗುತ್ತಿದೆ. ಈ ನಿಮಿತ್ತವಾಗಿಯಾದರೂ ಅವರು ಮತ್ತು ಇನ್ನಿತರರು ವಚನ ಸಾಹಿತ್ಯದ ಅಧ್ಯಯನಕ್ಕೆ ತೊಡಗಿದರೆ ಮುಂದೆ ಧರ್ಮಪ್ರಜ್ಞೆಯು ಸ್ಥಾಯಿಯಾಗುತ್ತಾ ಹೋಗುವುದು.

ಶರಣ ಮೇಳದಲ್ಲಿ ಶರಣ ವ್ರತಿಗಳಿಗೆ ವಿಶೇಷ ಸಂದರ್ಶನಾವಕಾಶ

ವಿಶೇಷವಾದ ದರ್ಶನಾವಕಾಶವನ್ನು ಏರ್ಪಡಿಸಿ, ಶರಣ ವ್ರತಿಗಳು ಬಸವ ಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷರನ್ನು ಸಂದರ್ಶಿಸಿ, ಶರಣ ವ್ರತಧಾರಣೆಗಾಗಿ ವಿಶೇಷ ಪ್ರಮಾಣ ಪತ್ರವನ್ನು ಪಡೆಯಲು ಅವಕಾಶ ಕಲ್ಪಿಸುವ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಪ್ರತಿ ವರ್ಷದ ಜನವರಿಯ

೧೫ನೆಯ ದಿನಾಂಕದಂದು ಈ ಗುರುದರ್ಶನ ಕಾರ್ಯಕ್ರಮವಿರುತ್ತಿದ್ದು ಶರಣ ವ್ರತಿಗಳು ಪೀಠಾಧ್ಯಕ್ಷರಿಂದ ಆಶೀರ್ವಾದ ಮತ್ತು ಪ್ರಮಾಣ ಪತ್ರವನ್ನು ಪಡೆಯಬಹುದಾಗಿರುತ್ತದೆ.

ಆಧಾರ ಗ್ರಂಥಗಳು

ಶರಣ ವ್ರತ ಧಾರಣೆಯ ಕಾಲದಲ್ಲಿ ವಚನ ಸಾಹಿತ್ಯ ಪಠಣಕ್ಕೆ ಮತ್ತು ವಚನ ಲೇಖನ ಕಾರ್ಯಕ್ಕೆ ಬಳಸಬಹುದಾದ ಗ್ರಂಥಗಳೆಂದರೆ :

೧. ಬಸವ ವಚನ ದೀಪ್ತಿ. ಸಂಪಾದಕರು : ಬಸವಾತ್ಮಜೆ
೨. ವಚನ ಸಾಹಿತ್ಯ ಸಂಗ್ರಹ. ಸಂಪಾದಕರು : ಎಸ್. ಎಸ್. ಭೂಸನೂರಮಠ
೩. ಕರ್ನಾಟಕ ಸರ್ಕಾರ ಪ್ರಕಟಿಸಿರುವ ವಚನ ಸಂಪುಟಗಳು.
೪. ಅಥವಾ ಲಭ್ಯವಿರುವ ಆದಿ ಶರಣರ ವಚನ ಕೃತಿಗಳು.

ಶ್ರೀಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಅವರ ಸಮಕಾಲೀನ ಶರಣರು ಬರೆದಿರುವ ವಚನಗಳು, ನಂತರದಲ್ಲಿ ಶ್ರೀ ತೋಂಟದ ಸಿದ್ಧಲಿಂಗೇಶ್ವರರು, ಷಣ್ಮುಖ ಶಿವಯೋಗಿಗಳು ಬರೆದಿರುವ ವಚನಗಳನ್ನು ಪಠಣ ಮಾಡಲು ಮತ್ತು ಬರೆಯಲು ಸೀಮಿತಗೊಳಿಸಬೇಕಾಗಿದೆ.

ವಚನ ಮಂಟಪ ರಚನೆ

ವಚನ ಮಂಟಪ ಬಳ್ಳಿ ಶುಚಿ ಮೊಗ್ಗೆ ಹೂ ಬಿಡಲು
ರುಚಿ ಜೇನ ಹುಟ್ಟ ಹೊಸಮತವ ಕಟ್ಟಿದರು
ವಚನ ಶಾಸ್ತ್ರಕರು ನಾಡೊಳಗೆ ॥ ನೇ.ಅ.75 ॥ *ಜನಪದ ಗೀತೆಗಳು*

ಸಾಮಾನ್ಯವಾಗಿ ಪೂಜಾ ಕೋಣೆಗಳು ಚಿಕ್ಕವಿರುತ್ತವೆ. ಆದ್ದರಿಂದ ನಡುಮನೆ ಅಥವಾ ಪಡಸಾಲೆಯಲ್ಲಿ ಒಂದು ಮಂಟಪ ರಚಿಸಿ, ಅದನ್ನು ಅಲಂಕರಿಸಿ ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರವಿಟ್ಟು, ಅದರ ಮುಂದೆ ಪಠಣ ಮಾಡುವ ವಚನ ಗ್ರಂಥ ಮತ್ತು ವಚನ ಲೇಖನ ಗ್ರಂಥವನ್ನು ಇಡಬೇಕು. ಎಲ್ಲ ವಿಧಿಗಳನ್ನೂ ಪೂಜೆ-ಪಠಣ-ಲೇಖನ ವಚನ ಮಂಟಪದ ಮುಂದೆಯೇ ಮಾಡಬಹುದು ; ಅಲ್ಲಿ ಏಕಾಂತ ಇರುವುದಿಲ್ಲ ಎಂಬುವ ಶಂಕೆ ಇದ್ದರೆ ಇಷ್ಟಲಿಂಗಾರ್ಚನೆ-ಶಿವಯೋಗ ಸಾಧನೆಯನ್ನು ಪೂಜಾಗೃಹದಲ್ಲಿ ಮಾಡಿ ಬಸವ ಗುರುಪೂಜೆ, ವಚನ ಪಠಣ, ವಚನ ಲೇಖನ ಮುಂತಾದುವನ್ನು ವಚನ ಮಂಟಪದ ಮುಂದೆಯೇ ಮಾಡಬೇಕು. ಈ ಪವಿತ್ರ ವಿಧಿ ಪೂರೈಸಿದ ಮೇಲೆ ಶರಣ ವ್ರತಿಯು ಮನೆಯ ಎಲ್ಲರಿಗೆ ಕರುಣೋದಕ-ಕರುಣಪ್ರಸಾದ ವಿತರಿಸಬೇಕು. ಈ ವ್ರತದ ಅವಧಿಯಲ್ಲಿ ಇನ್ನಿತರರನ್ನು ಜಾತಿಮತಭೇದವಿಲ್ಲದೆ ಆಹ್ವಾನಿಸಿ ಅವರೂ ವಚನ ಪಠಣದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ಒಮ್ಮೆ, ಇನ್ನಿತರ ಶರಣ ವ್ರತಿಗಳನ್ನು ಆಹ್ವಾನಿಸಿ, ಸಾಮೂಹಿಕ ಪ್ರಾರ್ಥನೆ-ವಚನ ಪಠಣ ಮಾಡಿ, ಪ್ರಸಾದ ದಾಸೋಹ ಮಾಡಬೇಕು. ವ್ರತದ ಅವಧಿಯಲ್ಲಿ ತಮ್ಮ ಆರ್ಥಿಕ ಶಕ್ತಿಗೆ ಅನುಸಾರವಾಗಿ ಇನ್ನಿತರರನ್ನು ಆಹ್ವಾನಿಸಿ ಪ್ರಸಾದ ದಾಸೋಹ ಮಾಡಿಸಬಹುದು. ವಚನ ಮಂಟಪದ ಬಳಿ ಒಂದು ಕಾಣಿಕೆ ಪೆಟ್ಟಿಗೆ (ಹುಂಡಿ) ಇಟ್ಟದ್ದು ಬಂದ ಜನರಿಗೆ ಧನ ಸಹಾಯ ಮಾಡಲು ಪ್ರೇರಣೆ ನೀಡಿ ಸಂಗ್ರಹವಾದ ಹಣವನ್ನು ಶರಣ ಮೇಳದ ದಾಸೋಹಕ್ಕಾಗಿ ತಂದು ಒಪ್ಪಿಸಬಹುದು. ಶರಣ ಮೇಳದಿಂದ ವಾಪಸ್ಸಾದ ಮೇಲೆ ವಚನ ಮಂಟಪವನ್ನು ಬಿಚ್ಚಬೇಕು.

ಮಾಘ ಪೌರ್ಣಿಮೆ ಸಂದರ್ಶನ

ಶರಣ ವ್ರತ ಕೈಗೊಂಡು ಸಹ ತೀರಾ ಅನಿವಾರ್ಯವಾದ ಕಾರಣಕ್ಕೆ ಜನವರಿ ೧೪ರಂದು ಶರಣ ಮೇಳದಲ್ಲಿ ಭಾಗಿಗಳಾಗಲು ಆಗದೆ ಇದ್ದರೆ ಮಾಘ ಪೌರ್ಣಿಮೆಯಂದು (ಚನ್ನ ಹುಣ್ಣಿಮೆ) ಕೂಡಲ ಸಂಗಮಕ್ಕೆ ಬಂದು ಗಣಲಿಂಗ ದರ್ಶನ ಪಡೆದು ವ್ರತವನ್ನು ಪೂರ್ಣಗೊಳಿಸಬಹುದು.

ಕಾಯಕ - ದಾಸೋಹ - ಪ್ರಸಾದ

ಶರಣರು ಬೋಧಿಸಲ್ಪಟ್ಟ ಪಂಚಾಚಾರಗಳಲ್ಲಿ ಒಂದಾದ ಸದಾಚಾರ ಅಥವಾ ಅರ್ಪಣಾ ತತ್ವದ ಮೂರು ಅಂಗಗಳು ಕಾಯಕ - ದಾಸೋಹ - ಪ್ರಸಾದ. ಇವು ಮೂರನ್ನೂ ಶರಣ ವ್ರತಿಗಳು ಶುದ್ಧವಾಗಿ ಪಾಲಿಸುತ್ತ ತಮ್ಮ ಆರ್ಥಿಕ ಸ್ಥಿತಿಯು ಅನುಮೋದಿಸುವಷ್ಟು ಧನ ದಾಸೋಹವನ್ನು ಮಾಡಬಹುದು. ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳಕ್ಕೆ ತಮ್ಮ ಸ್ವಂತ ಕಾಣಿಕೆಯನ್ನು ಮಾತ್ರವಲ್ಲದೆ, ಶರಣ ಮೇಳದ ಮಹತ್ವ ತಿಳಿಸಿ ಇನ್ನಿತರರಿಂದಲೂ ಕಾಣಿಕೆ ಸಂಗ್ರಹಿಸಿ ಕೊಡುವ ಪವಿತ್ರ ಕಾರ್ಯವನ್ನು ಶರಣ ವ್ರತಿಗಳು ಕೈಗೊಳ್ಳಬೇಕೆಂದು ನಿರೀಕ್ಷಿಸುವೆವು. ಹೆಚ್ಚಿನ ಸಂಖ್ಯೆಯಲ್ಲಿ ಶರಣ ವ್ರತಿಗಳು 2002 ಇಸವಿಯ ಶರಣ ಮೇಳದಲ್ಲಿ ಭಾಗಿಗಳಾಗಬೇಕೆಂದು ಆಶಿಸುತ್ತೇವೆ.

-ಬಸವಾತ್ಮಜೆ

ವಚನ ರಶ್ಮಿ

ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ

1. ಭಕ್ತಿಯ ಅಭಿವ್ಯಕ್ತಿ.

ಇಲಕಲ್ಲಿನವರು ಸ್ಥಾವರವ ನಂಬಿದರು
ದುರ್ಗದವರು ಧರ್ಮ ಮರೆತರು
ಭಾಲ್ಕಿಯವರು ಭೀತಿಗೊಳಗಾದರು
ಬಸವ ಭಕ್ತರು ಭಕ್ತಿ-ನಿಷ್ಠೆ ಮರೆದರು
ಇವರೆಲ್ಲರನು ನೋಡಿ ಮುಸಿ ನಗುತಲಿದ್ದ
ಲಿಂಗದೇವನೆಂಬ ನಿತ್ಯ ನಿರಂಜನ ಪ್ರಭು ತಾನು.

2. ಹಾರೈಕೆ.

ಹೊಗಳಿದರು ಕಣ್ಣಮುಂದೆ ಇದ್ದಾಗ
ನಿಂದಿಸಿದರು ಬೆನ್ನ ಹಿಂದೆ ಇರುವಾಗ
ಸಮಯ ಬಂದಂತೆ ನಡೆವವರಿಗೆ
ಅರಿವನ್ನಿತ್ತು ಹಾರೈಸು ನಿತ್ಯ ನಿರಂಜನ ಪ್ರಭುವೆ

3. ದೇವನ ಲೀಲೆ.

ಎಲ್ಲಿಗೂ ಹೋಗಲಾರೆ, ಎಲ್ಲಿಂದಲೋ ಬರಲಾರೆ
ಎಲ್ಲೆಡೆಯಿದ್ದಂತೆ ನನ್ನಲ್ಲೇ ನೀನಿದ್ದು
ಎನ್ನನು ಮರೆವಿನಲ್ಲಿರಿಸಿ ನೀನೊಬ್ಬನೇ
ನಗುತ್ತಲಿರುವೆ ನಿತ್ಯ ನಿರಂಜನ ಪ್ರಭುವೆ.

3. ಭವರೋಗ ವೈದ್ಯ.

ಸುಮ್ಮನೆ ಬಿಟ್ಟರೆ ಬಿಮ್ಮನೆ ಕೂರುವರು
ಕೆಲಸ ಹೇಳಿದ ಒಡನೆ ಕೆಮ್ಮನೆ ಕೆರಳುವರು
ಬುದ್ಧಿಯಿಲ್ಲದ ಮದ್ದು ಜನರನ್ನು ಮದ್ದಿತ್ತು ಸಲಹು
ಭವರೋಗ ವೈದ್ಯ ನಿತ್ಯ ನಿರಂಜನ ಪ್ರಭುವೆ.

5. ಮತ್ಸರದ ಮಹಾತ್ಮೆ.

ಮತ್ಸರವು ತನ್ನತನ ಕಳೆಯುತ್ತದೆ
ಮತ್ಸರವು ರೋಷ-ದ್ವೇಷ ಬೆಳೆಸುತ್ತದೆ
ಮತ್ಸರವು ಶಾಂತಿಭಂಗ ಮಾಡುತ್ತದೆ
ಮತ್ಸರವು ಸ್ಥಾನಮಾನ ಕುಂದಿಸುತ್ತದೆ
ಇಂತಪ್ಪ ಮತ್ಸರವ ಮತ್ಸರಿಸುವಂತಿರಿಸು
ನಿತ್ಯ ನಿರಂಜನ ಪ್ರಭುವೆ.

6. ಶರಣರ ಸಂಗದಲ್ಲಿ.

ದಾಸೋಹವ ಮಾಡುವರು ದಣಿವಿಲ್ಲದಂತೆ
ಸೇವೆಯ ಸಲ್ಲಿಸುವರು ಸ್ವಾರ್ಥವಿಲ್ಲದಂತೆ
ಮಾನವೀಯತೆ ಮೆರೆಯುವರು
ಮಾತೃ ಹೃದಯದಂತೆ
ದಾರಿಯ ತೋರುವರು ಸದ್ಗುರುವಿನಂತೆ
ಆನಂದವ ಅನುಭವಿಸುವರು ನಿಜ ಸಾಧಕನಂತೆ
ಇಂತಪ್ಪ ಶರಣರ
ಸಂಗದಲ್ಲಿದ್ದು ಕೃತಾರ್ಥನಾದೆನಯ್ಯಾ
ನಿತ್ಯ ನಿರಂಜನ ಪ್ರಭುವೆ.

ಸಮಸ್ಯೆ ? - ಸಮಾಧಾನ !

ಹೆಸರು .... ನಿಮಗೆ ರಾಜಕಾರಣಿಗಳ ಬಗ್ಗೆ ಅಭಿಮಾನವಿದೆಯೆ?

★ ಖಂಡಿತಾ ಇದೆ ಆದರೆ ಗೆದ್ದು ಅಧಿಕಾರದಲ್ಲಿರುವವರಿಗಿಂತಲೂ ಸೋತು ಅಧಿಕಾರ ಕಳಕೊಂಡವರ ಬಗೆಗೆ ಮತ್ತು ಚುನಾವಣೆಗೆ ಸ್ಪರ್ಧಿಸುತ್ತಿರುವವರ ಬಗೆಗೆ. ಏಕೆಂದರೆ ಆಗ ಅವರಲ್ಲಿ ಅಪಾರವಾದ ವಿನಯ, ಸೌಜನ್ಯ, ಸೇವೆ ಮಾಡಬೇಕೆಂಬ ಹಂಬಲ ತುಂಬಿ ತುಳುಕುತ್ತಿರುತ್ತದೆ. ಅಧಿಕಾರ ಸಿಗುತ್ತಲೇ ಇವೆಲ್ಲ ಮಾಯವಾಗುವ ಕಾರಣ ನನಗೆ ಸೋತವರ ಬಗ್ಗೆ ಮತ್ತು ಅಧಿಕಾರ ಕಳೆದುಕೊಂಡವರ ಬಗ್ಗೆ ತೀವ್ರ ಅಭಿಮಾನ !

ಹೆಚ್. ಬಿ. ಗೌರಣ್ಣ, ಮಂಜುನಾಥ ನಗರ, ಬೆಂಗಳೂರು.- ಲಿಂಗದೇವ ಪದದ ಮಹತ್ವ ತಿಳಿದು ಸಂತೋಷವಾಗುತ್ತಿದೆ. ಬಸವಣ್ಣನವರ ವಚನದ ಭಾವಕ್ಕೆ ಲಿಂಗದೇವ ವಚನಾಂಕಿತವೇ ಸೂಕ್ತ ಎಂಬುದು ಮನದಟ್ಟಾಗಿದೆ. ಏಕದೇವತಾ (ಶಿವ) ಉಪಾಸಕರಾಗಿದ್ದಾಗ ಅವರು ಕೂಡಲ ಸಂಗಮ ದೇವ ಬಳಸಿ ಏಕದೇವೋಪಾಸನೆ ಪ್ರತಿಪಾದಿಸಿದ ನಂತರ ಲಿಂಗದೇವ ಬಳಸಿರಬೇಕು ಎಂದು ಅನ್ನಿಸತೊಡಗಿದೆ.

★ ನಮ್ಮದೂ ಅದೇ ದೃಢ ನಂಬಿಕೆ. ಕಾಲಾನಂತರದಲ್ಲಿ, ವನವಾಸವನ್ನು ಮುಗಿಸಿ ಹೊರಬಂದ ವಚನ ವಾಙ್ಮಯ ಶೈವದ ಅಜ್ಞಾತ ವಾಸದ ಮುಸುಕನ್ನು ಹೊದೆಯಿತು. ಆಗ ಸಂಗ್ರಹ ಮತ್ತು ಸಂಪಾದನಕಾರರು ಲಿಂಗಾರ್ಚನೆಯನ್ನು ಶಿವಲಿಂಗಾರ್ಚನೆಯನ್ನು, ಅನುಭವ ಮಂಟಪವನ್ನು ಶಿವಾನುಭವ ಮಂಟಪವನ್ನಾಗಿ ಮಾಡುತ್ತ ಲಿಂಗದೇವ ಪಲ್ಲಟಿಸಿ, ಪೂರ್ವಾಶ್ರಮದಲ್ಲಿ ಉಪಯೋಗಿಸಿದ ಕೂಡಲ ಸಂಗಮದೇವವನ್ನು ಪುನರ್ ಪ್ರತಿಷ್ಠಾಪಿಸಿರಬೇಕು ಎಂದು ನಿಮ್ಮಂತೆಯೇ ನನ್ನದೂ ಅಭಿಪ್ರಾಯ.

ಓಂಕಾರ ಮತ್ತು ಪರಿವಾರ, ಬೀದರ.- ನಾವು ಹುಟ್ಟು ಲಿಂಗಾಯತರಲ್ಲ. ಬಸವಣ್ಣನವರ ತತ್ತ್ವಕ್ಕೆ, ಇಷ್ಟಲಿಂಗದ ಹಿರಿಮೆಗೆ ಮಾರುಹೋಗಿ ಲಿಂಗಾಯತರಾಗಿದ್ದೇವೆ. ನೀವು ಕಲ್ಯಾಣ ಕಿರಣದಲ್ಲಿ ಪ್ರಶ್ನೋತ್ತರದಲ್ಲಿ ಹೀಗೆ ಹೇಳಿದ್ದೀರಿ. ''ಹುಟ್ಟಿದಾಗ ಲಿಂಗಧಾರಣೆ ಆಗಿದ್ದರೂ ಪುನಃ ಬುದ್ಧಿ ಬಲಿತಾಗ ದೀಕ್ಷೆ ಪಡೆದು ಲಿಂಗಾಯತನಾಗಬೇಕು. ಕೇವಲ ಬಸವ ಭಕ್ತ ಇದ್ದು ಲಿಂಗಧರಿಸದೆ ಇದ್ದರೆ ಅವರು ಬಸವ ಧರ್ಮಾಭಿಮಾನಿಯೇ ವಿನಾ ಬಸವ (ಲಿಂಗಾಯತ) ಧರ್ಮಾನುಯಾಯಿಯಲ್ಲ. ಹುಟ್ಟಿದಾಗ ಲಿಂಗಧಾರಣೆ ಇಲ್ಲದೆ ಈಗ ದೀಕ್ಷೆ ಪಡೆದುಕೊಂಡ ನಾವು ಕೇವಲ ಅಭಿಮಾನಿಗಳೋ ಅನುಯಾಯಿಗಳೋ ?

★ ನೀವು ಶೇಕಡಾ 100 ಅನುಯಾಯಿಗಳು, ಹೀಗಾಗಿ ಸ್ವಾಭಾವಿಕವಾಗಿ ಅಭಿಮಾನಿಗಳೂ ಇರುತ್ತೀರಿ. ಹುಟ್ಟು ಲಿಂಗಾಯತರಿಗೆ ಯಾಂತ್ರಿಕ ಆಚರಣೆಯಾಗಿ ಮಗುವಿಗೆ ಲಿಂಗಧಾರಣೆ ಮಾಡಿಸುತ್ತಾರೆ. ಆ ಮಗು ಎಸ್. ಎಸ್. ಎಲ್. ಸಿ. ಸರ್ಟಿಫಿಕೇಟ್ ಹೊಂದಿದಂತೆ ಎಂದು ಭಾವಿಸಿರಿ. ಮುಂದೆ ಬುದ್ಧಿ ಬಲಿತಾಗ ತಾನೇ ಸ್ವಯಂ ಪ್ರೇರಣೆಯಿಂದ ದೀಕ್ಷೆ ಪಡೆದು ಪ್ರತಿಜ್ಞಾಬದ್ಧನಾಗಬೇಕು. ಇದು ಬಿ.ಎ. ಪದವಿ ಪಡೆದಂತೆ ಎಂದುಕೊಳ್ಳಿರಿ. ಮುಕ್ತ ವಿಶ್ವವಿದ್ಯಾಲಯದಲ್ಲಿ ಓದಿದ ಓರ್ವ ದೊರಕಿದ ಸೌಲಭ್ಯ ಉಪಯೋಗಿಸಿಕೊಂಡು ನೇರವಾಗಿ

ಬಿ.ಎ. ಪರೀಕ್ಷೆಗೆ ಕುಳಿತು ಪದವಿ ಪಡೆಯುತ್ತಾನೆ. ಎಸ್.ಎಸ್.ಎಲ್.ಸಿ.ಯವರೆಗೆ ಅಧಿಕೃತವಾಗಿ ಓದಿದರೂ ಮುಂದೆ ಓದದವನು ಅಷ್ಟಕ್ಕೆ ನಿಲ್ಲುತ್ತಾನೆ. ಎಸ್.ಎಸ್.ಎಲ್.ಸಿ. ಓದಿರದಿದ್ದರೂ ನೇರವಾಗಿ ಬಿ.ಎ. ಪರೀಕ್ಷೆ ಕಟ್ಟಿ ಪಾಸಾಗಿ ಪದವಿ ಪಡೆದವನು ಮುಂದಿನ ಮೆಟ್ಟಲೇರಿದಂತಲ್ಲವೇ ? ಹಾಗೆ ಹುಟ್ಟಿದಾಗ ಲಿಂಗಧಾರಣೆಯಾಗಿದ್ದರೂ ನಂತರ ಇಷ್ಟಲಿಂಗ ಧರಿಸದೆ ದೀಕ್ಷೆ ಪಡೆಯದೆ ತಿರುಗಾಡುವವರಿಗಿಂತಲೂ, ಹುಟ್ಟಿದಾಗ ಲಿಂಗಧಾರಣೆ ಪಡೆಯದೆ ಇದ್ದರೂ ನಂತರ ದೀಕ್ಷೆ ಪಡೆದು, ಇಷ್ಟಲಿಂಗ ಧರಿಸಿದವರೇ ಅನುಯಾಯಿಗಳು.

ಬಾಳಗೌಡ ಭೀಮಗೌಡ ಪಾಟೀಲ, ಕಣಬರಗಿ, ಬೆಳಗಾಂ ಜಿಲ್ಲೆ- ಅಖಿಲ ಭಾರತ ವೀರಶೈವ ಮಹಾಸಭೆ, ಜಿಲ್ಲಾ ಘಟಕ, ಬೆಳಗಾಂ ಅವರು 1999ನೆಯ ಇಸವಿ ದಿನದರ್ಶಿ ಪ್ರಕಟಿಸಿದ್ದರು. ಅದರಲ್ಲಿ ಲಿಂಗಾಯತ ಧರ್ಮದ ಪಂಚಸೂತ್ರಗಳು ಎಂದು ಮುದ್ರಿಸಿ, ಧರ್ಮಗುರು ಬಸವಣ್ಣನವರು ಎಂದು ಬರೆದಿದ್ದಾರೆ. ಮಾದರಿ ಕಳಿಸಿದ್ದೇನೆ. ಅಂದರೆ ವೀರಶೈವ ಮಹಾಸಭೆ ಬಸವಣ್ಣನವರು ಧರ್ಮಗುರು ಎಂದು ಒಪ್ಪಿದಂತಾಯಿತಲ್ಲವೆ ?

★ ಉತ್ತರ ಕರ್ನಾಟಕದ ಬಹು ಪಾಲು ಲಿಂಗಾಯತರು ಧರ್ಮಗುರು ಬಸವಣ್ಣನವರು ಎಂಬುದನ್ನು ನಿಸ್ಸಂದೇಹ ಪೂರ್ವಕವಾಗಿ ಒಪ್ಪಿದ್ದಾರೆ. ಬೆಳಗಾಂವ ಘಟಕದವರು ಒಪ್ಪುವುದು ಮುಖ್ಯವಲ್ಲ ; ಕೇಂದ್ರ ಸಂಸ್ಥೆ ಒಪ್ಪುವುದು ಮುಖ್ಯ ಮತ್ತು ನೀವು ಬೆಳಗಾಂವ ಘಟಕದವರ ಅಪ್ರಾಮಾಣಿಕತೆಯನ್ನು ಎರಡು ವಿಷಯಗಳಲ್ಲಿ ಗುರುತಿಸಬಹುದು. ಧರ್ಮಗುರು ಬಸವಣ್ಣನವರು ಎಂದೊಪ್ಪಿದ ಮೇಲೆ ಕವರ್ ಮೇಲೆ ಅದನ್ನು ಮುದ್ರಿಸಬೇಕಷ್ಟೆ. ಅಲ್ಲಿ ಹಾನಗಲ್ ಕುಮಾರಸ್ವಾಮಿಗಳ ಚಿತ್ರವಿದೆ. ಷಟ್‌ಸೂತ್ರಗಳು ಅಧಿಕೃತವಾಗಿ ಘೋಷಿತವಾಗಿರುವುವು. ಇದರಲ್ಲಿ ಧರ್ಮಕ್ಷೇತ್ರ ಕೂಡಲ ಸಂಗಮ ಎಂಬ ಸೂತ್ರವನ್ನು ತೆಗೆದುಹಾಕಿ ಐದು ಸೂತ್ರಗಳನ್ನು ಏಕೆ ಮಾಡಬೇಕಿತ್ತು ? ಇದು ಅಪ್ರಾಮಾಣಿಕತೆಯಲ್ಲವೆ ?

ಪುಷ್ಪಲತಾ, ಕೋಣನೂರು, ನಂಜನಗೂಡು ತಾಲ್ಲೋಕು.- ದೀಕ್ಷೆ ಪಡೆದುಕೊಂಡವರು ಮಾತ್ರ ಮುಕ್ತಿ ಹೊಂದಲು ಸಾಧ್ಯವೊ ? ಇಲ್ಲ ಲಿಂಗವನ್ನು ಧರಿಸಿದವರೆಲ್ಲರೂ ಮುಕ್ತಿ ಹೊಂದುವರೊ ?

★ ದೀಕ್ಷೆ ಹೊಂದಿ ಗುರು ಕಾರುಣ್ಯ ಪಡೆಯದೆ ತಾವಾಗಿ ಧರಿಸಿಕೊಂಡ ಲಿಂಗಾಯತರು ಶಾಲೆಗೆ ಹೋಗದೆ ಓದಲು ಕಲಿತಂತೆ. ಸೂಕ್ತ ವಿದ್ಯಾರ್ಹತೆ ಇಲ್ಲದೆ ಸರ್ಕಾರಿ ನೌಕರಿಗೆ ಹೇಗೆ ಬಾಧ್ಯರಾಗರೋ ಹಾಗೆ ಗುರುಕಾರುಣ್ಯ ಇಲ್ಲದವರು ಮುಕ್ತಿ ಪಡೆಯಲು ಸಾಧ್ಯವಿಲ್ಲ.

ಎಂ.ಡಿ. ತಡಸ, ನಿವೃತ್ತ ಶಿಕ್ಷಕರು, ಹುಬ್ಬಳ್ಳಿ.- ನಮ್ಮ ಮಿತ್ರರೊಬ್ಬರು ಸತ್ತ ನಂತರ ತಮ್ಮ ದೇಹವನ್ನು ಅಂಗ ಛೇದನ ಮಾಡಿ ಅಧ್ಯಯನ ಮಾಡಿಕೊಳ್ಳಲು ಮೆಡಿಕಲ್ ಕಾಲೇಜಿಗೆ ಕೊಡಲು ಬಯಸಿದ್ದಾರೆ. ಇದರಿಂದ ಧಾರ್ಮಿಕ ಆಚರಣೆಗೆ ಚ್ಯುತಿ ಬರುವುದೇ ? ಅಂಗವು ಛೇದನಗೊಂಡರೆ ಆತ್ಮಕ್ಕೆ ಮೋಕ್ಷವು ಪ್ರಾಪ್ತಿಯಾಗದು ಎಂದು ಕೆಲವರು ಹೆದರಿಸುತ್ತಾರೆ. ಇದು ಸತ್ಯವೆ ?

★ ವಚನ ವಾಙ್ಮಯದಲ್ಲಿ ನೇರವಾಗಿ ಇಂಥ ವಿಷಯದ ಪ್ರಸ್ತಾಪವಿಲ್ಲ ಮತ್ತು ಆ ಕಾಲದಲ್ಲಿ ಇದು ಊಹಿಸಲೂ ಸಾಧ್ಯವಾಗದ ವಿಷಯ. ವಚನ ಶಾಸ್ತ್ರಕಾರರ ವಿಚಾರಧಾರೆಯ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಿದರೆ ಶರೀರವನ್ನು ವೈದ್ಯಕೀಯ ಅಧ್ಯಯನಕ್ಕಾಗಿ ಛೇದನಕ್ಕೆ ಕೊಟ್ಟರೆ ತಪ್ಪಿಲ್ಲ. ಚನ್ನಮಲ್ಲಿಕಾರ್ಜುನನ ಅರಿದ (ಅರಿಯದ) ಕಾಯವ ನಾಯಿ ತಿಂದರೇನು ನೀರು ಕುಡಿದರೇನು ? ಎಂಬ ಅಕ್ಕನ ವಚನದ ಜಾಡು ಹಿಡಿದು ಅರ್ಥ ಮಾಡಿದರೆ ಆತ್ಮವು ವಿಸರ್ಜನೆಯಾದ ಬಳಿಕ ದೇಹವು ಏನಾದರೇನು ಎಂಬ ಮನೋಭಾವವಿದೆ. ಆದರೆ ಬೆಲೆಯುಳ್ಳ ಮಾನವ ಜನ್ಮವು ತೊಟ್ಟ ಶರೀರವನ್ನು ಅಗೌರವದಿಂದ ಕಾಣಬಾರದು, ಅದು ಒಂದು ಸಾಧನವಾಗಿ ಕೆಲಸ ಮಾಡಿದೆ ಎಂದು ಶರೀರವನ್ನು ಗೌರವಪೂರ್ಣವಾಗಿ ಸಮಾಧಿ ಮಾಡಲಾಗುವುದು. ಪಂಚಭೂತಗಳಿಂದ ಪಡೆದ ಕಾಯವನ್ನು ಪಂಚಭೂತಗಳಿಗೆ ವಾಪಸ್ಸು ಕೊಡಲು ಮಣ್ಣಿನಲ್ಲಿ ಹುಗಿಯಲಾಗುವುದು. ವೈದ್ಯಕೀಯ ಅಧ್ಯಯನಕ್ಕೆ ಕೊಡುವುದು ಇನ್ನೂ ಪ್ರಯೋಜನಕಾರಿ. ಲಿಂಗದೇವನೊಡನೆ ಬೆರೆಯುವುದು ಪರಿಶುದ್ಧ ಚೇತನವಾದ ಅಂಗ (ಆತ್ಮ)ವೇ ವಿನಾ ದೇಹವಲ್ಲ. ಆದ್ದರಿಂದ ದೇಹವನ್ನು ವೈದ್ಯಕೀಯ ಅಧ್ಯಯನಕ್ಕೆ ಕೊಡುವುದು ಮೋಕ್ಷಕ್ಕೆ ಬಾಧಕವೇನಲ್ಲ.

☒ಬಸಣ್ಣ, ದೇವಣಗಾಂವ, ಗುಲಬರ್ಗಾ.- 2000ದ ಸಾಲಿನಲ್ಲಿ ಗಂಗೋತ್ರಿಗೆ ಬಂದಾಗ ಒಂದು ಶಿವನ ಮತ್ತು ನಂದಿಯ ಮೂರ್ತಿಯನ್ನು ನೋಡಿದ್ದೆ. ನೋಡಿ ಆಶ್ಚರ್ಯವಾಯಿತು. ಏಕದೇವೋಪಾಸನೆ ಹೇಳುವ ಮಾತಾಜಿ ಇವನ್ನೇಕೆ ತೆಗೆದಿಲ್ಲ, ಎನ್ನಿಸಿತು. ಕೇಳುವ ಧೈರ್ಯವಾಗಿರಲಿಲ್ಲ. ಸಂಶಯ ಪರಿಹಾರವಾಗದ ಕಾರಣ ಈಗ ಕೇಳುತ್ತಿದ್ದೇನೆ.

★ ಇಷ್ಟು ದಿವಸ ಕಾಲ ನೀವು ಪ್ರಶ್ನೆ ಕೇಳಲು ವಿಳಂಬ ಮಾಡುವ ಅಗತ್ಯವೇ ಇರಲಿಲ್ಲ. ಕ್ರಾಂತಿಯೋಗಿ ಬಸವಣ್ಣ ಸಿನೆಮಾ ಮಾಡುವಾಗ ಕೆಲವೊಂದು ವಸ್ತುಗಳನ್ನು ಮಾಡಿಸಿದ್ದೆವು. ಬಸವಣ್ಣನವರು ಬಾಲ್ಯದಲ್ಲಿ ಶಿವನ ಆರಾಧಕರಾಗಿದ್ದರಷ್ಟೆ. ಸಂಗಮೇಶ್ವರ ಲಿಂಗದ ಮುಂದೆ ನಂದಿಯನ್ನು ಇಡುವುದಕ್ಕಾಗಿ ನಂದಿಯನ್ನು ಮಾಡಿಸಲಾಗಿತ್ತು. ಅದನ್ನು ಮಾಡಿದ ಕಲಾವಿದ ಎಷ್ಟು ಸುಂದರವಾಗಿ ಮಾಡಿದ್ದನೆಂದರೆ ಯೋಗಿ ಶಿವನ ಚಿಕ್ಕ ಮೂರ್ತಿ ಮನುಷ್ಯ ಆಕಾರವನ್ನು ಸರ್ವಾಂಗ ಸುಂದರವಾಗಿ ಹೊಂದಿತ್ತು. ನಂದಿ ಸಹ ಕಲಾತ್ಮಕವಾಗಿತ್ತು. ಅದಕ್ಕಾಗಿ ಅವುಗಳನ್ನು ಕಲಾಕೃತಿಗಳೆಂದು ಪ್ರದರ್ಶನಕ್ಕೆ ಇಡಲಾಗಿತ್ತೇ ವಿನಾ ಪೂಜೆಗಾಗಿ ಅಲ್ಲ.

☒ ನಾನು ಪ್ರಸಾದಿಕ ದೀಕ್ಷೆ ಪಡೆದಿದ್ದೇನೆ. ಊಟವಾದ ಮೇಲೆ ತಟ್ಟೆಯನ್ನು ತೊಳೆದು ನೀರು ಕುಡಿಯುತ್ತೇನೆ. ಕೆಲವರು ಹೇಳಿದರು. ಕೊನೆಯಲ್ಲಿ ಹಾಲು ಮೊಸರು ಉಣ್ಣುತ್ತೇವೆ. ಹಾಲು-ಮೊಸರು ಕೊಡುವ ಹಸುವಿಗೆ ನಾವು ಅವನ್ನು ಕೊಡಬೇಕು. ಕೈತೊಳೆದು, ಚೆಲ್ಲದೆ ಆ ಮುಸುರೆ ನೀರನ್ನು ಹಸುವಿಗೆ ಕುಡಿಸಬೇಕು ಎಂದು. ಅಹುದೆ ?

★ ಕೇವಲ ಪ್ರಸಾದಿಕರಷ್ಟೆ ಅಲ್ಲ ಎಲ್ಲರೂ ಪ್ರಸಾದವನ್ನು (ಊಟವನ್ನು) ಪೂರ್ಣವಾಗಿ ಸ್ವೀಕರಿಸಿ ಕೈತೊಳೆದು ಆ ನೀರನ್ನು ಕುಡಿಯಬೇಕು. ತಾವು ಆ ಲಿಂಗಕ್ಕೆ ನಿವೇದಿಸಿದ ವಸ್ತುಗಳನ್ನು ನಾಯಿ, ಬೆಕ್ಕು, ಹಸು ಮುಂತಾದ್ದಕ್ಕೆ ಕೊಡಬಾರದು. ಒಂದು ವೇಳೆ ಗುರು, ಜಂಗಮ, ಶರಣರ

ಅನುಗ್ರಹ ಬೇಕು ಎಂದು ಅಂಥ ಪ್ರಸಾದವನ್ನು ಇನ್ನಿತರ ಶರಣರು ಕೇಳಿದರೆ ಕೊಡಬಹುದು.

★ಹಸುವಿಗೆ ನೀವು ಹಾಲು ಮೊಸರು ಕೊಡಬೇಕಿಲ್ಲ. ಹುಲ್ಲು - ಹಿಂಡಿ - ಬೂಸಾ ತಿಂದು ಅದಕ್ಕೆ ಹಾಲು ಉತ್ಪಾದಿಸುವ ವಿಶೇಷ ಶಕ್ತಿಯಿದೆ. ಸಾರವುಳ್ಳ ಪದಾರ್ಥಗಳನ್ನು ಬೀಸಾಡಬಾರದೆಂದು ಮುಸುರೆಯಾಗಿ ಮಾಡಿ ಹಸು, ಎಮ್ಮೆಗಳಿಗೆ ಕೊಡಬಹುದು.

☒ಕಲ್ಯಾಣರಾವ್, ಚಾಳಕ್ಯಾಪುರ, ಬೀದರ್.- ಶರಣರ ವಚನಗಳು ಅತ್ಯಂತ ಮೌಲಿಕ ಮತ್ತು ಪ್ರಸ್ತುತ ಬದುಕಿಗೆ ದಾರಿದೀಪಗಳು ಎಂಬ ಬಗ್ಗೆ ಸಂದೇಹವಿಲ್ಲ. ಆದರೆ ಕೆಲವೊಂದು ವಚನಗಳಲ್ಲಿ ಏನು ಸಂದೇಶ ಲಭ್ಯವಾಗುತ್ತದೆ ಎಂಬುದೇ ತಿಳಿಯದು ಉದಾಹರಣೆಗೆ :

ಚಲಿ ಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣರೆ ನೀವು ಕಾಣರೇ !
ಸರೋವರ ದೊಳಗಾಡುವ ಹಂಸೆಗಳಿರಾ, ನೀವು ಕಾಣರೆ ನೀವು ಕಾಣರೇ !
ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣರೆ ನೀವು ಕಾಣರೇ !
ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣರೆ ನೀವು ಕಾಣರೇ !
ಗಿರಿ ಗಹ್ವರದೊಳಗಾಡುವ ನವಿಲುಗಳಿರಾ, ನೀವು ಕಾಣರೆ ನೀವು ಕಾಣರೇ !
ಚನ್ನಮಲ್ಲಿಕಾರ್ಜುನ ದೇವನೆಲ್ಲಿದ್ದಾನೆಂಬುದು ಬಲ್ಲಡೆ ನೀವು ಹೇಳರೆ, ನೀವು ಹೇಳಿರಿ !

ಈ ವಚನದ ಅರ್ಥ ಸರಳವಾಗಿ ಹೇಳಿರಿ.

★ ಕೆಲವು ವಚನಗಳು ಸಂದೇಶವನ್ನು ನೀಡಿದರೆ, ಉದಾ : ನೆಲದ ಮರೆಯ ನಿಧಾನದಂತೆ, ಈಳೆ ನಿಂಬೆ ಮಾವು, ಕೆಲವು ವ್ಯಕ್ತಿಯ ಅನುಭವವನ್ನು ಮತ್ತು ಸಂದೇಶವನ್ನು ಬಿತ್ತರಿಸುತ್ತವೆ. ಉದಾ: ಸಾವಿಲ್ಲದ, ಕೇಡಿಲ್ಲದ, ಬೆಟ್ಟದ ಮೇಲೊಂದು ಮನೆಯ ಮಾಡಿ, ಮುಂತಾದುವು. ಮತ್ತೆ ಕೆಲವು ಕೇವಲ ವೈಯಕ್ತಿಕ ಅನುಭವ ಹೇಳುತ್ತವೆ. ಪ್ರಾರಂಭದ ದಿನಗಳಲ್ಲಿ ದೇವರ ಸ್ವರೂಪ ಅವನ ಸರ್ವವ್ಯಾಪಕತ್ವ, ಸರ್ವಾಂತರ್ಯಾಮಿತ್ವ ತಿಳಿದಿಲ್ಲದೆ ಇರುವಾಗ ದೇವರನ್ನು ಪ್ರಕೃತಿಯಲ್ಲಿ, ಗಿಡಮರಬಳ್ಳಿ, ಪಶುಪಕ್ಷಿಗಳಲ್ಲಿ ಹುಡುಕುವ ಪ್ರಯತ್ನ ನಡೆಯುವುದು. ಇದು ಮುಗ್ಧ ಮನಸ್ಸಿನ ಹುಡುಕಾಟ. ತಾತ್ವಿಕ ಚಿಂತನೆ, ಸಾಧನೆ ಗಟ್ಟಿಗೊಂಡಾಗ ಈ ಹೊರಗಿನ ಹುಡುಕಾಟ ನಿಂತು ಆ ಅನ್ವೇಷಣೆ ಅಂತರ್ಮುಖವಾಗುವುದು. ಆದ್ದರಿಂದ ಈ ವಚನವನ್ನು ಅಕ್ಕಮಹಾದೇವಿ ಸಾಧನೆಯ ಪ್ರಾರಂಭದ ದಿನಗಳಲ್ಲಿ ಬರೆದಿದ್ದಾಳೆ ಎಂದು ಊಹಿಸಬಹುದು. ದಟ್ಟವಾದ ವನಸಂಪತ್ತಿನ ಮಲೆನಾಡಿನಲ್ಲಿ ಹುಟ್ಟಿ ಬೆಳೆದ ಆಕೆಗೆ ಗಿಳಿ, ಕೋಗಿಲೆ, ನೀರಿನ ಕೊಳ, ತಾವರೆ, ತುಂಬಿ, ಹಂಸೆ, ನವಿಲು ನಿತ್ಯ ಕಾಣುವ ಪ್ರಾಣಿಗಳು. ಅವುಗಳನ್ನೆಲ್ಲ ಕುತೂಹಲದಿಂದ ದೇವನೆಲ್ಲಿದ್ದಾನೆಂದು ಕೇಳಿದ್ದಾಳೆ.

ಇನ್ನೊಂದು ಅಂತರಾರ್ಥವನ್ನು ನಾನು ತರಂಗಿಣಿಯಲ್ಲಿ ಬರೆದಿದ್ದೇನೆ.

1. ಚಲಿಮಿಲಿ ಎಂದೋದುವ ಗಿಳಿ-ಗಿಳಿಗಳಂತೆ ಓದುವ ಶಾಸ್ತ್ರ ಪಂಡಿತರು.
2. ಸರೋವರದ ಹಂಸೆ - ಧ್ಯಾನಾನಂದದಲ್ಲೇ ತಲ್ಲೀನರಾಗುವ ರಾಜಯೋಗಿಗಳು.
3. ಸರವೆತ್ತಿಪಾಡುವ ಕೋಗಿಲೆ - ಬರೀ ಹಾಡುವುದರಲ್ಲೇ ತಲ್ಲೀನರಾಗುವ ಗಾನಯೋಗಿಗಳು.

4. ಎರಗಿ ಬಂದಾಡುವ ತುಂಬಿ - ಭಕ್ತಿಸಾಧನೆಯಲ್ಲಿ ತಲ್ಲೀನರಾಗುವ ಭಾವುಕಭಕ್ತರು
5. ಗಿರಿಗಹ್ವರದೊಳಾಡುವ ನವಿಲು- ಯಾಂತ್ರಿಕ ಸಾಧನೆ ಮಾಡುವ ಹಠಯೋಗಿಗಳು.

ನೀವು ಕಾಣರೆ ಎಂಬುದನ್ನು ಕಾಣರೆ ? ಕಂಡಿದ್ದೀರಾ ? ಎಂದು ಕೇಳಿರಬಹುದು. ಇಲ್ಲವೇ ನೀವು ಕಾಣರೆ. ಅಂದರೆ ಕಾಣಲು ಸಾಧ್ಯವಿಲ್ಲ. ನಿಮ್ಮದೆಲ್ಲ ಒಮ್ಮುಖದ ಸಾಧನೆ ಎಂದು ನಿರ್ಧರಿಸಿ ಹೇಳಿರಲೂಬಹುದು.

✉ ಮುರುಗನ್, ಕಾಟೇರಿ, ನೀಲಗಿರಿ ಜಿಲ್ಲೆ.- ನಮ್ಮ ಕಡೆಗೆ ಮೊದಲು ಯಾರದೂ ಗಮನವಿರಲಿಲ್ಲ. ಬಸವ ಧರ್ಮ ಪೀಠದಿಂದ ತಾವು ಪೂಜ್ಯ ಗಂಗಾ ಮಾತಾಜಿಯವರನ್ನು ಕಳಿಸಿದಿರಿ. ನಮಗೆ ಹೊಸ ಬೆಳಕು ಮೂಡಿದಂತಾಯಿತು. ಒಂದು ಉತ್ತಮ ದಾರಿ ಸಿಕ್ಕಿತು. ಮೊದಲನೆಯ ಬಸವ ಧರ್ಮ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದಿರಿ. ಆಗ ನಮ್ಮ ಭಾಗದ ಮೇಲೆ ಹಲವಾರು ಮಠಾಧೀಶರ (ವಕ್ರ) ದೃಷ್ಟಿ ಬಿದ್ದಿತು. ಈಗ ನಮಗೆ ಸಮಸ್ಯೆ ಬಹಳವಾಗುತ್ತಿದೆ. ಗಂಗಾ ಮಾತಾಜಿ ಪೂಜೆ ಕಲಿಸಿ ಇಷ್ಟಲಿಂಗಕ್ಕೆ ಮಜ್ಜನಕ್ಕೆರೆದು, ಭಸ್ಮಧರಿಸಿ, ಹೂವು ಏರಿಸಿ, ಧೂಪ ಅರ್ಪಿಸಿ, ಆರತಿ-ನೈವೇದ್ಯ ಮುಂತಾದ ಅಷ್ಟವಿಧಾರ್ಚನೆ ಮಾಡಲು ಕಲಿಸಿದ್ದರು. ಈಗ ಕೆಲವರು ಬಂದು ಅವನ್ನೆಲ್ಲ ಏನೂ ಅರ್ಪಿಸಬೇಕಿಲ್ಲ ಬರೀ ತ್ರಾಟಕ ಮಾಡಿದರೆ ಸಾಕು ಎನ್ನುತ್ತಿದ್ದಾರೆ. ಮೊದಲೇ ಕನ್ನಡ ಓದಲು ಬರದ ಜನರು ಗೊಂದಲಕ್ಕೆ ಒಳಗಾಗುತ್ತಿದ್ದಾರೆ. ಸ್ವಾಮಿಗಳ ಸಹವಾಸವೇ ಸಾಕು ಎನ್ನುವಂತಾಗಿದೆ.

★ ನಿಮ್ಮ ಸಮಸ್ಯೆ ಅರ್ಥವಾಗುತ್ತದೆ. ರೋಗಾಣುಗಳು ಧಾಳಿ ಮಾಡುವುದು ಸ್ವಾಭಾವಿಕ ; ಅದಕ್ಕಾಗಿ ರೋಗ ನಿರೋಧಕ ಶಕ್ತಿ ಬೆಳೆಸಿಕೊಳ್ಳಬೇಕು. ವಚನ ಸಾಹಿತ್ಯದಲ್ಲಿ ಬರುವ ನೂರಾರು ವಚನಗಳಲ್ಲಿ ಅಷ್ಟವಿಧಾರ್ಚನೆ ಹೇಳಲ್ಪಟ್ಟಿದೆ. ಆಯತ, ಸ್ವಾಯತ, ಸನ್ನಿಹಿತ ಎಂಬ ಮೂರು ಕ್ರಿಯೆಗಳಿವೆ. ಸ್ಥೂಲದೇಹಕ್ಕೆ ಇಷ್ಟಲಿಂಗವನ್ನು ಆಯತ (ಧಾರಣೆ) ಮಾಡಿಕೊಂಡು, ನಿತ್ಯವೂ ಕರಕಮಲದಲ್ಲಿಟ್ಟುಕೊಂಡು ಪತ್ರೆ-ಪುಷ್ಪ, ಧೂಪ-ದೀಪಗಳಿಂದ ಅರ್ಚಿಸುವುದು ಇಷ್ಟಲಿಂಗಪೂಜೆ. ಇದು ದೇವನಿಗೆ ಭಕ್ತ ಸಲ್ಲಿಸುವ ಕೃತಜ್ಞತಾ ಸಮರ್ಪಣೆ (thanks giving). ಹೃದಯ ಪೀಠದಲ್ಲಿ ಪ್ರಾಣಲಿಂಗ (ಆತ್ಮ)ವನ್ನು ಪರಿಕಲ್ಪಿಸಿ ಸದ್ಗುಣಗಳಿಂದ ಮನೋಹಸ್ತದಿಂದ ಅರ್ಚಿಸುವುದು ಸ್ವಾಯತ. ಆ ಪೂಜೆಯ ಆನಂದವನ್ನು ಸರ್ವಾಂಗದಲ್ಲೂ ತುಂಬಿಕೊಳ್ಳುವುದು ಸನ್ನಿಹಿತ. ಅದಕ್ಕಾಗಿಯೇ ಲಿಂಗಾಂಗ ಯೋಗದಲ್ಲಿ 5 ಹಂತಗಳಿವೆ.

1. ಅಷ್ಟವಿಧಾರ್ಚನೆ 2. ಲಿಂಗ ಸ್ತವನ. 3. ಲಿಂಗಾನುಸಂಧಾನ. 4.ಲಿಂಗ ಧ್ಯಾನ 5.ಕರುಣಪ್ರಸಾದ ಸ್ವೀಕಾರ. ಇದನ್ನು ತಿಳಿದುಕೊಳ್ಳಿ. ಇನ್ನೊಬ್ಬರಿಗೂ ತಿಳಿಸಿರಿ.

✉ ಓರ್ವ ಸ್ವಾಮಿಗಳು ಜೇಲಿನಲ್ಲಿ ಬೋಧೆ, ಸಾಮೂಹಿಕ ಇಷ್ಟಲಿಂಗ ಪೂಜೆ ಮಾಡಿಸುತ್ತಾರೆ. ನೀವು ಬಹಿರಂಗವಾಗಿ ಪೂಜೆ ಮಾಡಿಸುತ್ತೀರಿ ಅದು ತಪ್ಪು ಎಂದು ಕೆಲವು ಮಡಿವಂತ ವೀರಶೈವರು ನಿಮ್ಮನ್ನು ಟೀಕಿಸುವರು. ಆದರೆ ಅವರು ಆ ಸ್ವಾಮಿಗಳನ್ನು ಟೀಕಿಸುವುದಿಲ್ಲ ಏಕೆ ? ಇನ್ನೂ ಸೋಜಿಗವೆಂದರೆ ಚಾಕಲೇಟ್, ಪೆಪ್ಪರಮೆಂಟ್ ಹಂಚಿದಂತೆ

ಇಷ್ಟಲಿಂಗಗಳನ್ನು ಎಲ್ಲರಿಗೂ ವಿತರಿಸುತ್ತಾರೆ. ಆಮೇಲೆ ಕೆಲವರು ಇಷ್ಟಲಿಂಗವನ್ನು ಆಟದ ವಸ್ತುವಾದ ಗೋಲಿಯಂತೆ ಬಳಸುವುದು ಕಂಡು ನಮಗೆ ನೋವು-ಮುಜುಗರ ಎರಡೂ ಆಗುತ್ತಿದೆ. ಈ ಬಗ್ಗೆ ನಿಮ್ಮಭಿಪ್ರಾಯ ?

★ ವೀರಶೈವ ಸಮಾಜವು ಕೆಲವೊಂದು ವಿಶೇಷ ಗುಣಗಳಿಂದ ಕೂಡಿದೆ. ಶ್ರೀಮಂತ ಸ್ವಾಮಿಗಳು ಮಾಡುವ ಎಲ್ಲ (ಅಕ್ಷಮ್ಯ) ತಪ್ಪುಗಳೂ ಅವರಿಗೆ ಒಪ್ಪುಗಳು ! ಮುಮುಕ್ಷುವಿನ ಹಂಬಲದಿಂದ ಯಾವುದೇ ಜಾತಿಮತಪಂಥಗಳವರು ಇಷ್ಟಲಿಂಗ ದೀಕ್ಷೆಯನ್ನೇ ಕೇಳಲಿ, ಜಂಗಮ ದೀಕ್ಷೆಯನ್ನೇ ಸ್ವಯಂ ಪ್ರೇರಣೆಯಿಂದ ಕೇಳಲಿ ಅವರಿಗೆ ಕೊಡಬೇಕು ಎಂಬುದೇ ಬಸವ ಧರ್ಮದ ಆಶಯ ಮತ್ತು ಧ್ಯೇಯ ! ಆದರೆ ಶ್ರದ್ಧೆ ಮತ್ತು ಜ್ಞಾನ ಇಲ್ಲದವರಿಗೆ ಚಾಕಲೇಟ್, ಪೆಪ್ಪರಮೆಂಟ್‌ನಂತೆ ಹಂಚಲು ಹೋದರೆ ಇಷ್ಟಲಿಂಗದ ಪಾವಿತ್ರ್ಯ ಕಡಿಮೆಯಾಗುತ್ತದೆ. ಹಾಗೆ ಜೇಲಿನಂತಹ ಎಲ್ಲ ಜಾತಿಮತಧರ್ಮಪಂಥಗಳವರು ಇರುವಲ್ಲಿ ಅವರಿಗೆ ಇಷ್ಟವಿಲ್ಲದಿದ್ದರೂ ಇಷ್ಟಲಿಂಗ ಕೊಟ್ಟರೆ, ಇವರು ಮತಾಂತರ ಮಾಡುತ್ತಾರೆ ಎಂಬ ಹುಯಿಲು ಎದ್ದು ಜನರಲ್ಲಿ ತಪ್ಪು ಕಲ್ಪನೆ ಮೂಡುತ್ತದೆ. ಅತ್ಯುತ್ಸಾಹದ ಭರದಲ್ಲಿ ಕೆಲವರು ಅವಿವೇಕದ ಹೆಜ್ಜೆಗಳನ್ನು ಇಡುತ್ತಾರೆ ಅಷ್ಟೆ. ಅಂಥವರ ಪರಿಸ್ಥಿತಿ ಹೇಗೆಂದರೆ,

ಹೊಲಬನರಿಯದ ಗುರು ತಿಳಿಯಲರಿಯದ ಶಿಷ್ಯ
ನೆಲೆಯನಾರಯ್ಯದುಪದೇಶ । ಅಂಧಕನು
ಕಳನ ಹೊಕ್ಕಂತೆ ಸರ್ವಜ್ಞ ॥

ಸರಿಯಾದ ದಾರಿ ತನಗೇ ತಿಳಿಯದ ಗುರು, ಗುರು ಹೇಳಿದ್ದನ್ನು ಅರಿಯಲು ಅಸಮರ್ಥನಾದ ಶಿಷ್ಯ, ಸರಿಯಾದ ಜ್ಞಾನ ನೀಡದ ಉಪದೇಶ - ಇವು ಮೂರು ಕುರುಡನು ಯುದ್ಧ ಭೂಮಿಯನ್ನು ಹೊಕ್ಕಂತೆ ಅಷ್ಟೆ !

ನವೆಂಬರ್ ತಿಂಗಳಲ್ಲಿ ಬರುವ ಹಬ್ಬ-ಜಯಂತಿಗಳು

ನವೆಂಬರ್ 16 ಚನ್ನಬಸವಣ್ಣನವರ ಜಯಂತಿ-ಕಾರ್ತಿಕ ಶುದ್ಧ ಪ್ರತಿಪದೆ
ನವೆಂಬರ್ 16 ವಚನ ದೀಪೋತ್ಸವ
ನವೆಂಬರ್ 30 ಚನ್ನಬಸವ ಲಿಂಗೈಕ್ಯ ಸಂಸ್ಮರಣೆ-ಕಾರ್ತಿಕ ಹುಣ್ಣಿಮೆ.

ಲಾಂಛನವ ಧರಿಸಿದರೇನು,
ವಿಷಯದಾರೆ ಹಿಂಗದನ್ನಕ್ಕ ?
ಬೋಧೆಯ ಬೊಗಳೆಯ ಬಿಟ್ಟರೇನು,
ಅಂತರಂಗ ಹಸನಾಗಿ ಅವಗುಣಗಳಳಿಯದನ್ನಕ್ಕ ?
ವಿಷಯರಹಿತರಾಗಿ ಅಂತರಂಗ ಶುದ್ಧಿಯಾದ
ಶರಣರ ತೋರಿ ಬದುಕಿಸಯ್ಯಾ,
ಮಾತಾ ಪ್ರಿಯ ಸಚ್ಚಿದಾನಂದ.

ನನ್ನಿಚ್ಛೆಯಲ್ಲಿರದೆ ತನ್ನಿಚ್ಛೆಯಲ್ಲಿ ಹೋಹ
ಮನದ ಉಪಟಳವನೆಂತು ಸೈರಿಸಲಯ್ಯಾ ?
ಹರಿದತ್ತ ಹೋಹ ಮನವ ಬೆಂಬತ್ತಿ
ನೊಂದು ಬೆಂದು ಘಾಸಿಗೊಳಗಾದೆನಯ್ಯಾ.
ಇಂತಪ್ಪ ಮನದ ಸಂಗವ ಬಿಡಿಸಿ
ನಿಮ್ಮ ಸ್ಮರಣೆಯಲ್ಲಿ ಎನ್ನ ತೊಡಗಿಸಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

-ಮಾತೆ ಅಕ್ಕಮಹಾದೇವಿ

ಪರಿಪೂರ್ಣ ವ್ಯಕ್ತಿತ್ವ ರೂಪಿಸಲು ಸಹಕಾರಿಯಾದ

ಬಸವ ತತ್ತ್ವ ತರಬೇತಿ ಕಮ್ಮಟ

ಬಸವ ಗಂಗೋತ್ರಿ - ವಿಶ್ವಗುರು, ಮಂತ್ರಪುರುಷ ಬಸವಣ್ಣನವರು ಪರಿಪೂರ್ಣ ವ್ಯಕ್ತಿತ್ವದ ಮಹಾನ್‌ಪ್ರವಾದಿಗಳು. ಅವರ ತತ್ತ್ವಸಿದ್ಧಾಂತವನ್ನು ಪ್ರಸಾರ ಮಾಡುವ ಘನ ಉದ್ದೇಶದಿಂದ ಪರಮಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರವಚನ, ಕಮ್ಮಟ ಹಾಗೂ ಸಮಾವೇಶಗಳ ಮೂಲಕ ಕರ್ನಾಟಕ ಮಾತ್ರವಲ್ಲದೆ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ಭಾರತದ ವಿವಿಧೆಡೆಗಳಲ್ಲಿ ಬಸವ ತತ್ತ್ವದ ಪ್ರಸಾರ - ಪ್ರಚಾರ ಕಾರ್ಯಕೈಗೊಂಡಿದ್ದು ಸರ್ವವಿದಿತ.

ಧರ್ಮ ಮತ್ತು ದೇವರಲ್ಲಿ ಶ್ರದ್ಧೆಯನ್ನು ಕಳೆದುಕೊಳ್ಳುತ್ತಿರುವ ಇಂದಿನ ಈ ಕಂಪ್ಯೂಟರ್ ಯುಗದ ಯುವ ಜನಾಂಗಕ್ಕೆ ಬಸವ ತತ್ತ್ವದ ತರಬೇತಿ ಕೊಡುವುದಕ್ಕಾಗಿ ಪ್ರತಿವರ್ಷದಂತೆ ಈ ವರ್ಷವೂ ಕೂಡ ಬೆಂಗಳೂರು - ಮೈಸೂರು ಹೆದ್ದಾರಿಯಲ್ಲಿರುವ ಬಸವಗಂಗೋತ್ರಿ (ಕುಂಬಳಗೋಡು)ಯಲ್ಲಿ ವಿಶ್ವಕಲ್ಯಾಣ ಮಿಷನ್ ವತಿಯಿಂದ ಅಕ್ಟೋಬರ್ 14 ರಿಂದ 28 ರವರೆಗೆ ತರಬೇತಿ ಕಮ್ಮಟವನ್ನು ಏರ್ಪಡಿಸಲಾಗಿತ್ತು. 15 ದಿವಸದ ಈ ಕಮ್ಮಟವು ಪರಮ ಪೂಜ್ಯ ಮಾತಾಜಿಯವರ ದಿವ್ಯ ಸನ್ನಿಧಿ ಹಾಗೂ ಪರಮ ಪೂಜ್ಯ ಸದ್ಗುರು ಅಲ್ಲಮಪ್ರಭು ಸ್ವಾಮೀಜಿಯವರ ನೇತೃತ್ವದಲ್ಲಿ ತುಂಬ ಯಶಸ್ವಿಯಾಗಿ ಜರುಗಿತು. ಕರ್ನಾಟಕದ ವಿವಿಧ ಜಿಲ್ಲೆ, ತಾಲ್ಲೂಕು, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡಿನಿಂದ ಆಗಮಿಸಿದ ಮುನ್ನೂರ ಐವತ್ತಕ್ಕೂ ಅಧಿಕ ಶಿಬಿರಾರ್ಥಿಗಳು ಇಲ್ಲಿ ತಮ್ಮ ಬಾಳಿನ ಪಣತೆಗಳನ್ನು ಹೊತ್ತಿಸಿಕೊಂಡರು.

ಶಿಬಿರಾರ್ಥಿಗಳು ಪ್ರತಿನಿತ್ಯ ಬೆಳಗಿನ ಜಾವ ನಾಲ್ಕುಗಂಟೆಗೆ ಎದ್ದು ಸ್ನಾನಾದಿಕ್ರಿಯೆಗಳನ್ನು ಮುಗಿಸಿಕೊಂಡು 4-30 ರಿಂದ 5-30 ರವರೆಗೆ ಪ್ರಾಣಾಯಾಮ ಕ್ಲಾಸ್‌ಗೆ ಹಾಜರಾಗುವುದು, 5-30 ರಿಂದ 6-30 ರವರೆಗೆ ಯೋಗಾಸನ 7, ಗಂಟೆಯಿಂದ 9-30 ವರೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ, ಧ್ಯಾನ ಮತ್ತು ಓಂಕಾರೋಪಾಸನೆ, 9-30 ರಿಂದ 10-30 ರವರೆಗೆ ಉಪಹಾರ ಮುಗಿಸಿಕೊಂಡು ಪ್ರವಚನ ಕಾರ್ಯಕ್ರಮದಲ್ಲಿ ಭಾಗಿಯಾಗುವುದು. 1-30 ಕ್ಕೆ ಮಧ್ಯಾಹ್ನಪ್ರಸಾದ, ಮತ್ತೆ 3-30 ರಿಂದ 5-30 ಚರ್ಚೆ ಹಾಗೂ ಶಿಬಿರಾರ್ಥಿಗಳಿಗಾಗಿ ಪ್ರಶ್ನೋತ್ತರ ಕಾರ್ಯಕ್ರಮ. 5-30 ರಿಂದ ಆಟ ಹಾಗೂ ಸಾಯಂಕಾಲದ ಪೂಜೆ ಮುಗಿಸಿಕೊಂಡು 7 ಗಂಟೆಗೆ ಸರಿಯಾಗಿ ನೆನಹು ಪ್ರಾರ್ಥನೆಯೊಂದಿಗೆ ಪರಮ ಪೂಜ್ಯ ಮಾತಾಜಿಯವರ ಪ್ರವಚನದಲ್ಲಿ ಎಲ್ಲ ಶಿಬಿರಾರ್ಥಿಗಳು ಭಾಗಿಗಳಾಗುತ್ತಿದ್ದರು. ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷ ಶರಣ ವೀರಣ್ಣ ಕೊರ್ಲ್ಹಳ್ಳಿಯವರು ಪ್ರತಿನಿತ್ಯವೂ ಪ್ರಾಣಾಯಾಮದ ಮಹತ್ವವನ್ನು ಮನದಟ್ಟಾಗುವಂತೆ ತಿಳಿಸುವುದಲ್ಲದೆ ಪ್ರಾಯೋಗಿಕವಾಗಿ ಮಾಡಿಸಿ ತೋರಿಸಿದ್ದರಿಂದ ನೂರಾರು ಶಿಬಿರಾರ್ಥಿಗಳು ಇದರ ಲಾಭ ಪಡೆದುಕೊಂಡರು. ಮಾನವನ ಆರೋಗ್ಯ ಕಾಪಾಡಿಕೊಳ್ಳಲು ತುಂಬ ಉಪಯುಕ್ತವಾದ ಯೋಗಾಸನಗಳನ್ನು

ಶರಣ. ಮಹಾಂತೇಶ ಯೋಗಾಚಾರ್ಯ ಅವರು ಕಲಿಸಿದರು. 10 ವರ್ಷದ ಮಕ್ಕಳಿಂದ 70 ವರ್ಷದ ವೃದ್ಧರವರೆಗೆ ಪ್ರತಿಯೊಬ್ಬ ಶರಣ - ಶರಣೆಯರು ಯೋಗಾಸನದಲ್ಲಿ ಆಸಕ್ತಿಯಿಂದ ಭಾಗವಹಿಸಿದ್ದು ವೈಶಿಷ್ಟಪೂರ್ಣವಾಗಿತ್ತು.

ಪ್ರತಿನಿತ್ಯ ಎರಡೂವರೆ ಗಂಟೆಗಳ ಕಾಲ ಸಾಮೂಹಿಕ ಇಷ್ಟಲಿಂಗ ಪೂಜೆ, ಧ್ಯಾನ, ಓಂಕಾರೋಪಾಸನೆಗಳ ತರಬೇತಿಯನ್ನು ಪೂಜ್ಯ ಸದ್ಗುರು ಅಲ್ಲಮಪ್ರಭು ಸ್ವಾಮೀಜಿ ನೀಡಿದರು. ಲಿಂಗಾಂಗ ಯೋಗದ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವ ಹಾಗೂ ಸ್ವತಃ ಸಾಧನೆಯಿಂದ ಆನಂದವನ್ನು ಅನುಭವಿಸಿರುವ ಪೂಜ್ಯರ ಪೂಜಾ ವಿಧಾನವು ಎಲ್ಲ ಶಿಬಿರಾರ್ಥಿಗಳ ಮನಸ್ಸನ್ನು ಎರಡೂವರೆ ಗಂಟೆಗಳ ವರೆಗೆ ಒಂದೆಡೆ ಹಿಡಿದಿಡುತ್ತಿತ್ತು. ಪೂಜೆ - ಧ್ಯಾನದಿಂದ ಪ್ರಭಾವಿತರಾಗಿ ಪ್ರತಿನಿತ್ಯ ಹತ್ತಾರು ಜನ ಹೊಸದಾಗಿ ಆಗಮಿಸಿದ ಶಿಬಿರಾರ್ಥಿಗಳು ಇಷ್ಟಲಿಂಗ ದೀಕ್ಷೆ ಪಡೆದರು.

ಬೆಳಿಗ್ಗೆ ಗೋಷ್ಠಿಯಲ್ಲಿ ಪೂಜ್ಯ ಸ್ವಾಮೀಜಿಯವರು ಪ್ರತಿನಿತ್ಯ ಒಂದೊಂದು ವಿಷಯಗಳ ಕುರಿತು ಪ್ರವಚನ ನೀಡಿದರು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತ್ತು ಶಕ್ತಿ ವಿಶಿಷ್ಟಾದ್ವೈತ ಈ ಎಲ್ಲ ಸಿದ್ಧಾಂತಗಳ ಬಗ್ಗೆ ಶಿಬಿರಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ಪರಮ ಪೂಜ್ಯ ಮಾತಾಜಿಯವರು ದೇವರ ಅಸ್ತಿತ್ವ, ದೇವರ ಸ್ವರೂಪ, ಷಟ್ ಸೂತ್ರಗಳು, ಧರ್ಮದ ಲಕ್ಷಣಗಳು, ಷಡಾಚಾರ, ಷಟ್‌ಸ್ಥಲ ಷಟ್‌ಶೀಲಗಳ ಬಗ್ಗೆ ವಿವರವಾಗಿ ತಮ್ಮ ಪ್ರವಚನದ ಮೂಲಕ ಮನವರಿಕೆ ಮಾಡಿಸಿದರು. ಶಿಬಿರದಲ್ಲಿ ತಾವು ಪಡೆದ ಜ್ಞಾನ ಹಾಗೂ ಆನಂದಕ್ಕೆ ಪ್ರತಿಯಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟರೂ ಸಹ ಕಡಿಮೆಯೇ ಎಂದು ಶಿಬಿರಾರ್ಥಿಗಳು ಧನ್ಯತೆಯ ಭಾವದಿಂದ ಪೂಜ್ಯ ಮಾತಾಜಿಯವರನ್ನು ಕೊಂಡಾಡಿದರು. ದಿನಾಂಕ 21ರಂದು ದೇವ(ಭಾನು)ವಾರ ಪರಿಸರ ಮಾಲಿನ್ಯ ಮತ್ತು ವೈಪರಿತ್ಯ ಕುರಿತು ಪತ್ರಕರ್ತ ಶರಣ. ಕೆ.ಗುರುದೇವ್ ದೊಡ್ಡಬಳ್ಳಾಪುರ ಅವರು ಸಾಕ್ಷ್ಯಚಿತ್ರಗಳೊಂದಿಗೆ ಉಪನ್ಯಾಸ ನೀಡಿದರು.

ದಿ.26 ರಂದು ವಿಜಯ ದಶಮಿಯ ದಿನದಂದು ಕ್ರಾಂತಿಗಂಗೋತ್ರಿ ಅಕ್ಕನಾಗಲಾಂಬಿಕೆಯ ಸಂಸ್ಮರಣೆ ಹಾಗೂ ಕಲ್ಯಾಣಕ್ರಾಂತಿಯ ವಿಜಯೋತ್ಸವವನ್ನು ಭಕ್ತಿ - ಶ್ರದ್ಧೆಯಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಅಂದು ಪೂಜ್ಯ ಸದ್ಗುರು ಅಲ್ಲಮಪ್ರಭು ಸ್ವಾಮೀಜಿಯವರ 41ನೇ ವರ್ಧಂತಿ ಉತ್ಸವ ಕೂಡ ಇದ್ದುದು ಇನ್ನೂ ವಿಶೇಷವಾಗಿತ್ತು. ಪರಮ ಪೂಜ್ಯ ಮಾತಾಜಿಯವರ ಸನ್ನಿಧಿಯಲ್ಲಿ ಈ ಕಾರ್ಯಕ್ರಮವು ಅಚ್ಚುಕಟ್ಟಾಗಿ ನೆರವೇರಿತು. ಜನ್ಮದಿನದ ನಿಮಿತ್ತ ಪೂಜ್ಯ ಸ್ವಾಮೀಜಿಯವರ ಪಾದ ಪೂಜೆ ಮಾಡಿ, ಶರಣ ಶರಣೆಯರು ಪುಷ್ಪವೃಷ್ಟಿ ಮಾಡುವುದರ ಮೂಲಕ ಅಭಿನಂದಿಸಿದರು. ನೂರಾರು ಜನ ಶರಣ - ಶರಣೆಯರು ತಮ್ಮ ಕಾಣಿಕೆ ಸಲ್ಲಿಸಿದರು. ಪರಮ ಪೂಜ್ಯ ಮಾತಾಜಿಯವರು ಈ ಸಂದರ್ಭದಲ್ಲಿ ಪುಷ್ಪವೃಷ್ಟಿ ಮಾಡಿ ಪೂಜ್ಯ ಸ್ವಾಮೀಜಿಯವರನ್ನು ಆಶೀರ್ವದಿಸಿದರು.

ದಿ. 27ರಂದು ಭಕ್ತಿಪಕ್ಷ ಸಮ್ಮೇಳನ ಆರಂಭವಾಯಿತು. ಕರ್ನಾಟಕ ಮಾತ್ರವಲ್ಲದೆ

ಹೊರರಾಜ್ಯಗಳಿಂದ ಒಂದು ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಪ್ರತಿನಿಧಿಗಳು ಭಕ್ತಿಪಕ್ಷ ಸಮ್ಮೇಳನದಲ್ಲಿ ಭಾಗವಹಿಸಿದರು.

ಬಸವ ತತ್ತ್ವ ತರಬೇತಿ ಕಮ್ಮಟದಲ್ಲಿ ಶಿಬಿರಾರ್ಥಿಗಳಿಗೋಸ್ಕರ ' ವಿಧಿವಾದ ' ಮತ್ತು 'ಪ್ರಯತ್ನವಾದ' ಕುರಿತು ಚರ್ಚಾಸ್ಪರ್ಧೆ ಇಟ್ಟುಕೊಳ್ಳಲಾಗಿತ್ತು. ಐವತ್ತು ಜನ ಶಿಬಿರಾರ್ಥಿಗಳು ಪರ ಮತ್ತು ವಿರೋಧ ಅಭಿಪ್ರಾಯಗಳನ್ನು ಸಮರ್ಥವಾಗಿ ಮಂಡಿಸಿದರು. ಚರ್ಚಾಸ್ಪರ್ಧೆಯು ಪೂಜ್ಯ ಸದ್ಗುರು ಅಲ್ಲಮಪ್ರಭು ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸನ್ನಿಧಿವಹಿಸಿದ್ದ ಪರಮ ಪೂಜ್ಯ ಮಾತಾಜಿಯವರು ಈ ಸಂದರ್ಭದಲ್ಲಿ ಹೊಸ ಆವಿಷ್ಕಾರ(ವಾದ)ವೊಂದನ್ನು ನೀಡಿದರು. ಅದೇನೆಂದರೆ, ಕೇವಲ ವಿಧಿಯನ್ನು ನಂಬಿ ಕೈಕಟ್ಟಿ ಕುಳಿತರೆ ಹೇಡಿತನವಾಗುತ್ತೆ. ಇದು ದುರ್ಬಲ ಮನಸ್ಸಿನ ಅಸ್ತ್ರ. ಆದರೆ ಕೇವಲ ಪ್ರಯತ್ನದಿಂದಲೂ ಎಲ್ಲವನ್ನೂ ಸಾಧಿಸಲು ಸಾಧ್ಯವಿಲ್ಲ. ಬರೀ ಪ್ರಯತ್ನದಿಂದಲೇ ಏನೆಲ್ಲ ಸಾಧಿಸುತ್ತೇನೆ ಎನ್ನುವುದು ಅಹಂಕಾರವಾಗುತ್ತದೆ. ಆದ್ದರಿಂದ ನಾವು ದೇವಕಾರುಣ್ಯವಾದವನ್ನು ಒಪ್ಪುತ್ತೇವೆ ಎಂದು ಪೂಜ್ಯ ಮಾತಾಜಿ ತಿಳಿಸಿದರು. ವಿಧಿಯನ್ನು ನಿರ್ಮಿಸಿದವನು ಸೃಷ್ಟಿಕರ್ತ ಪರಮಾತ್ಮ ಲಿಂಗದೇವ. ಆದ್ದರಿಂದ ಅವನೊಲಿದರೆ ಕೊರಡು ಕೊನರುವುದು ಬರಡು ಹಯನಹುದು, ವಿಷವು ಅಮೃತವಹುದು ಎಂದು ಮಾರ್ಮಿಕವಾಗಿ ದೇವಕಾರುಣ್ಯವಾದಕ್ಕೆ ಪೂಜ್ಯ ಮಾತಾಜಿಯವರು ವ್ಯಾಖ್ಯಾನ ನೀಡಿದರು.

ಶಿಬಿರಾರ್ಥಿಗಳಿಗಾಗಿ ಧಾರ್ಮಿಕ ರಸ ಪ್ರಶ್ನೆ ಸ್ಪರ್ಧೆಯನ್ನು ಸಹ ಈ ಸಂದರ್ಭದಲ್ಲಿ ನಡೆಸಲಾಯಿತು. ದಿ.27 ರಂದು ಬೆಳಿಗ್ಗೆ ಭಕ್ತಿ ಪಕ್ಷ ಸಮ್ಮೇಳನದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸಮಗ್ರ ಮಹಿಳಾ ಅಭಿವೃದ್ಧಿ ಕ್ರಿಯಾ ಯೋಜನಾ ಸಮಿತಿಯ ಅಧ್ಯಕ್ಷೆ ಶರಣೆ ಗುರಮ್ಮ ಸಿದ್ದಾರೆಡ್ಡಿಯವರು ನೆರವೇರಿಸಿ, ಪರಮ ಪೂಜ್ಯ ಮಾತಾಜಿಯವರು ಲಿಂಗಾಯತ ಧರ್ಮ ಪ್ರಚಾರ ಮತ್ತು ಸಮಾಜ ಸಂಘಟನೆಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡು ಅವಿರತವಾಗಿ ಶ್ರಮಿಸುತ್ತಿದ್ದಾರೆ ಮಾತ್ರವಲ್ಲ ಲಕ್ಷಾಂತರ ಅನುಯಾಯಿಗಳನ್ನು ತಮ್ಮ ದಾರಿಯಲ್ಲಿ ಮುನ್ನಡೆಸುತ್ತಿದ್ದಾರೆ ಎಂದು ಕೊಂಡಾಡಿದರು. ಯಶವಂತಪುರದ ಶ್ರೀ ಬಸವೇಶ್ವರ ಸೇವಾ ಸಮಿತಿಯ ಅಧ್ಯಕ್ಷರಾದ ಶರಣ. ಬಸವರಾಜ ತಿಂಡ್ಲು ಬಸವ ಧ್ವಜಾರೋಹಣ ಮಾಡಿದರು. ಸೇವಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಶರಣ ಬಸವರಾಜಯ್ಯ ಅತಿಥಿಗಳಾಗಿ ಆಗಮಿಸಿದ್ದರು. ದೇವಸಂದ್ರ ಅಕ್ಕನ ಬಳಗದ ಅಧ್ಯಕ್ಷೆ ಶರಣೆ ಸರೋಜಮ್ಮ ಎಸ್.ಕಾತರಕಿ ಅಧ್ಯಕ್ಷತೆಯನ್ನು ವಹಿಸಿದ್ದರು.

ಮಾಜಿ ಶಾಸಕಿ ಹಾಗೂ ಖ್ಯಾತ ನ್ಯಾಯವಾದಿಗಳಾದ ಶರಣೆ ಪ್ರಮೀಳಾ ನೇಸರ್ಗಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ದಿವ್ಯ ಸನ್ನಿಧಿ ವಹಿಸಿದ್ದ ಪರಮ ಪೂಜ್ಯ ಮಾತಾಜಿಯವರು ಆಶೀರ್ವಚನ ನೀಡುತ್ತ, ಲಿಂಗಾಯತ ಧರ್ಮವು 12 ನೇ ಶತಮಾನದಲ್ಲಿ ಗುರು ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ ಸ್ವತಂತ್ರ, ಸ್ವಾವಲಂಬಿ ಹಾಗೂ ಪರಿಪೂರ್ಣ ಧರ್ಮ. ಲಿಂಗಾಯತರು ಅಜ್ಞಾನ ಮತ್ತು ಮೂಢತನದಿಂದ ಇದನ್ನು ಹಿಂದೂ ಧರ್ಮದ ಒಂದು ಜಾತಿಯೆಂದು ಭಾವಿಸಿದ್ದಾರೆ. ಪ್ರತಿಯೊಬ್ಬ ಲಿಂಗಾಯತರು ಜಾಗೃತರಾಗಿ ಭಾರತದ

ಸಂವಿಧಾನದ ಪ್ರಕಾರ ಸ್ವತಂತ್ರ ಧರ್ಮ ಎಂದು ಮಾನ್ಯತೆ ಪಡೆಯುವುದಕ್ಕಾಗಿ ದುಡಿಯಬೇಕೆಂದು ಕರೆಕೊಟ್ಟರು.

ಗಣನಾಯಕಿ ಶರಣೆ ದೇವಿಕಾ ಶರಣಪ್ಪ, ಶರಣ ಡಾ|| ಶಿವಗೌಡ ಪಾಟೀಲ ಸಂಕೇಶ್ವರ, ಶರಣ ವೀರಣ್ಣ ಕೊರ್ಲಹಳ್ಳಿ, ಶರಣ ಅಣ್ಣಪ್ಪ ವಾಲಿ ಬೈಲಹೊಂಗಲ್, ಶರಣ ಜಗನ್ನಾಥ ಪನ್ಸಾಲೆ, ಶರಣ ಶಿವರಾಜ ಪಾಟೀಲ ಅತಿವಾಳ ಬೀದರ್ ಶರಣೆ ಮಾಲೂತಾಯಿ ಚಂದ್ರಕಾಂತ ಸ್ವಾಮಿ ಲಿಂಗಾಯತ ಮುಂತಾದ ಗಣ್ಯರು ಮಧ್ಯಾಹ್ನದ ಚಿಂತನಗೋಷ್ಠಿಯಲ್ಲಿ ಭಾಗವಹಿಸಿದ್ದರು. ವ್ಯಾಪಾರಸ್ಥರು ಹಾಗೂ ದಾನಿಗಳಾದ ಶರಣ. ತಿಂಡ್ಲು ವೀರಣ್ಣನವರು ಅತಿಥಿಗಳಾಗಿದ್ದರು.

★ ವಿಶ್ವಶಾಂತಿಗಾಗಿ ಸತ್‌ಸಂಕಲ್ಪ ★

ಸಹಸ್ರ ಶರಣರಿಂದ ಸಾಮೂಹಿಕ ಇಷ್ಟಲಿಂಗಾರ್ಚನೆ

ಬೆಂಗಳೂರು, 28 - ಧರ್ಮ ಮತ್ತು ದೇವರ ಹೆಸರಿನಲ್ಲಿ ಇಂದು ವಿಶ್ವದಲ್ಲಿ ಹಿಂಸಾಚಾರ ಮತ್ತು ಯುದ್ಧಗಳು ಆಗುತ್ತಿದ್ದು, ಈ ಭಯೋತ್ಪಾದನೆಯನ್ನು ವಿರೋಧಿಸಿ, ವಿಶ್ವಶಾಂತಿ ಆಶಿಸಿ ನಾವಿಂದು ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಹಮ್ಮಿಕೊಂಡಿದ್ದೇವೆ ಎಂದು ಕೂಡಲಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಬೆಂಗಳೂರು ಮಹಾನಗರದ ಕೋಟೆ ಹೈಸ್ಕೂಲ್ ಮೈದಾನದಲ್ಲಿ ಇಂದು ಒಂದು ಸಾವಿರ ಜನ ಶರಣ ಶರಣೆಯರು ಒಟ್ಟಿಗೆ ಕುಳಿತು ಸಾಮೂಹಿಕವಾಗಿ ಇಷ್ಟಲಿಂಗ ಪೂಜೆ ಮಾಡಿಕೊಳ್ಳುವ ಅಪೂರ್ವ, ವೈಶಿಷ್ಟ್ಯ ಪೂರ್ಣವಾದ ಕಾರ್ಯಕ್ರಮದ ದಿವ್ಯಸನ್ನಿಧಿ ವಹಿಸಿ ಪೂಜ್ಯ ಮಾತಾಜಿಯವರು ವಿಶ್ವಶಾಂತಿಗಾಗಿ ಎಲ್ಲರೂ ಶ್ರಮಿಸಬೇಕಲ್ಲದೆ ದೇವನಲ್ಲಿ ಪ್ರಾರ್ಥಿಸಬೇಕೆಂದು ಕರೆಕೊಟ್ಟರು. ಶರಣ ಎಂದರೆ ವಿಶ್ವಪ್ರಜೆಯಾದ ನಾನು ಧರ್ಮ ಮತ್ತು ದೇವರ ಹೆಸರಿನಲ್ಲಿ ಪ್ರದರ್ಶಿತವಾಗುತ್ತಿರುವ ಮತಾಂಧತೆ, ಹಿಂಸೆಯ ವಿರುದ್ಧ ಜನ ಜಾಗೃತಿಯ ಆಂದೋಲನದಲ್ಲಿ ಭಾಗಿಯಾಗುತ್ತೇನೆ ಎಂಬ ಪ್ರತಿಜ್ಞೆಯನ್ನು ಪೂಜ್ಯ ಪೂಜ್ಯ ಮಾತಾಜಿಯವರು ಮಾಡಿಸಿದರು.

ಸಾಮೂಹಿಕ ಇಷ್ಟಲಿಂಗಾರ್ಚನೆ ಹಾಗೂ ಬಸವ ತತ್ತ್ವ ಸಮಾವೇಶದ ಉದ್ಘಾಟನೆಯನ್ನು ಬೆಲ್ಜಿಯಂ ದೇಶದ ಅಂತರಾಷ್ಟ್ರೀಯ ಖ್ಯಾತ ಕಲಾವಿದ ಶರಣ ಜಿನ್ ಲಿಷರ್ಟ್ ಆಶ್ಚರ್ಯಚರ್ಯ ಅವರು ನೆರವೇರಿಸಿ ಮಾತನಾಡುತ್ತ, ಸಕಲ ಜೀವಾತ್ಮರಿಗೆ ಲೇಸ ಬಯಸಿದ ಶ್ರೀ ಬಸವೇಶ್ವರರ ತತ್ತ್ವದಿಂದ ವಿಶ್ವಕ್ಕೆ ಶಾಂತಿ ಸಾಧ್ಯ ಎಂದು ಹೇಳಿದರು. ಗುರು-ಲಿಂಗ-ಜಂಗಮಕ್ಕೆ ತನು-ಮನ-ಧನವನ್ನು ಅರ್ಪಿಸಬೇಕೆಂಬ ಬಸವಣ್ಣನವರ ತತ್ತ್ವವು ವಿಶ್ವಮಾನ್ಯವಾಗಿದೆ. ಇಂದು ಈ ಶಾಂತಿಮಂತ್ರವನ್ನು ವಿಶ್ವದೆಲ್ಲೆಡೆ ಪಸರಿಸಬೇಕಾದ ಅಗತ್ಯವಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಅಂತರಾಷ್ಟ್ರೀಯ ಹೃದಯ ರೋಗ ತಜ್ಞ ಶರಣ

ಡಾ|| ಸಿ. ವೀರಪ್ಪನವರು ಮಾತನಾಡಿ (USA) ಪೂಜ್ಯ ಮಾತಾಜಿಯವರು ಕೇವಲ ಹೆಸರಿಗೆ ಮಾತಾಜಿಯಲ್ಲ ಅವರು ಕರ್ನಾಟಕದ ಮಾತೆಯಾಗಿದ್ದಾರೆ. ಭಾರತದ ಮಾತೆಯಾಗಿದ್ದಾರೆ ಎಂದು ಹೃದಯ ತುಂಬಿ ಮಾತನಾಡಿದರು.

ನಿಜವಾದ ಶ್ರೀಮಂತರೆಂದರೆ ಅಮೆರಿಕನ್ನರಲ್ಲ. ಜಪಾನ್‌ದವರಲ್ಲ, ಭಾರತೀಯರೇ ಅತ್ಯಂತ ಶ್ರೀಮಂತರು. ಹೃದಯ ಸಿರಿವಂತಿಕೆ ಮತ್ತು ಅಧ್ಯಾತ್ಮ ಸಿರಿವಂತಿಕೆ ಎರಡೂ ಭಾರತೀಯರಲ್ಲಿವೆ. ಗುರು ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಮಂತ್ರವು ನಮ್ಮನ್ನು ಸಿರಿವಂತರನ್ನಾಗಿ ಮಾಡಿದೆ ಎಂದು ಮಾರ್ಮಿಕವಾಗಿ ಮಾತನಾಡಿದರು. ಶರಣ. ಚನ್ನಬಸವಣ್ಣ ಚೆನ್ನೈ ಅವರು 2002 ನೇ ಇಸ್ವಿಯ ಪಾಕೆಟ್ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಅಂತರಾಷ್ಟ್ರೀಯ ಖ್ಯಾತಿ ಪಡೆದ ಡಾ|| ಎಮ್.ಸಿ.ಮೋದಿ ಅವರು ದೇವಪೂಜಾ ವಿಧಾನ ಪುಸ್ತಕ ಬಿಡುಗಡೆ ಮಾಡಿ ಮಾತನಾಡುತ್ತ ವಿಶ್ವದ ಎಲ್ಲೆಡೆ ಹಿಂಸಾಚಾರ ಭಯೋತ್ಪಾದನೆ ತಾಂಡವವಾಡುತ್ತಿರುವ ಇಂದಿನ ಈ ಪ್ರಕ್ಷುಬ್ಧ ಸ್ಥಿತಿಯಲ್ಲಿ ಚಿಕ್ಕಮಕ್ಕಳಿರುವಾಗಲೇ ಶಾಂತಿಮಂತ್ರ ಕಲಿಸುವ ಅಗತ್ಯವಿದೆ. ಮಕ್ಕಳನ್ನು ಅಧ್ಯಾತ್ಮಪಥದಲ್ಲಿ ನಡೆಸಬೇಕೆಂದು ಕರೆಕೊಟ್ಟರು.

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಪೀಠಾಧ್ಯಕ್ಷರಾದ ಪೂಜ್ಯ ಜಗದ್ಗುರು ಮಾತೆ ಗಂಗಾದೇವಿಯವರು 'ಶ್ರೀ ಬಸವೇಶ್ವರ ಪೂಜಾವ್ರತ' ಪುಸ್ತಕವನ್ನು ಬಿಡುಗಡೆ ಮಾಡಿ ಪ್ರವಚನ ನೀಡುತ್ತ, ಭಯೋತ್ಪಾದನೆಯ ದಳ್ಳುರಿಯಲ್ಲಿ ವಿಶ್ವವೇ ಉರಿಯುತ್ತಿರುವ ಇಂದಿನ ಸ್ಥಿತಿಯಲ್ಲಿ ವಿಶ್ವಶಾಂತಿಯನ್ನು ಬಯಸಿ ಸೃಷ್ಟಿಕರ್ತ ಲಿಂಗದೇವನ ಪೂಜೆಯನ್ನು ಸಹಸ್ರಾರು ಶರಣರೆಲ್ಲ ಸೇರಿ ಮಾಡುವ ಈ ಅಭೂತ ಪೂರ್ವವಾದ ಕಾರ್ಯಕ್ರಮದ ರೂಹಾರಿ ಪೂಜ್ಯ ಮಾತಾಜಿಯವರು. ವಿಶ್ವದಲ್ಲಿ ಯಾರೂ ಮಾಡದ ಕಾರ್ಯವನ್ನು ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು ಮಾಡಿದ್ದಾರೆ ಎಂದರು. ಶರಣೆ. ಸುಧಾ ನಾಗರಾಜ ತಂಡದ ಮಕ್ಕಳಿಂದ ವಚನ ನೃತ್ಯ ಜರುಗಿತು. ಎಲ್ಲರ ಮನಕ್ಕೆ ಆನಂದ ನೀಡಿದರು. ಸುಮಂಗಲಿ ಸೇವಾಶ್ರಮದ ಮಕ್ಕಳ ಬ್ಯಾಂಡ್ ವೃಂದವು ಕಾರ್ಯಕ್ರಮಕ್ಕೆ ಶೋಭೆ ತಂದಿತು. ಕಮ್ಮಟದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಡಾ|| ಅನ್ನದಾನೇಶ್ವರ ಆದಿಯವರು ಹೋಮಿಯೋಪಥಿ ಚಿಕಿತ್ಸೆ ನೀಡಿದರು.

ಪೂಜ್ಯ ಸದ್ಗುರು ಅಲ್ಲಮಪ್ರಭು ಸ್ವಾಮೀಜಿ, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ, ಪೂಜ್ಯ ಮಾತೆ ದಾನೇಶ್ವರಿ, ಪೂಜ್ಯ ಮಾತೆ ಕಸ್ತೂರಿದೇವಿ, ಮಾಜಿ ಶಾಸಕಿ ಪ್ರಮಿಳಾ ನೇಸರ್ಗಿ, ಕಾರ್ಪೊರೇಟರ್ ಜಯರತ್ನ ಮತ್ತು ತಮಿಳುನಾಡು ರಾಷ್ಟ್ರೀಯ ಬಸವದಳದ ಶರಣ ಚಂದ್ರಶೇಖರ, ಮಹಾರಾಷ್ಟ್ರ ಅಧ್ಯಕ್ಷೆ ಶರಣೆ. ಮಾಲೂತಾಯಿ, ಕರ್ನಾಟಕ ಅಧ್ಯಕ್ಷ, ವೀರಣ್ಣ ಕೊರ್ಲ್ಹಳ್ಳಿ ಉಪಸ್ಥಿತರಿದ್ದರು ಶರಣ ಎನ್.ಪುಟ್ಟರುದ್ರ ಸ್ವಾಗತಿಸಿದರು.

ವಿಶ್ವಶಾಂತಿಗಾಗಿ ಪಾದಯಾತ್ರೆ : ಧರ್ಮದ ಗುರಿ ಮಾನವ ಕಲ್ಯಾಣ

"ಅನೇಕ ಮಹಾತ್ಮರು, ಪ್ರವಾದಿಗಳು ಧರ್ಮಗಳನ್ನು ಕೊಟ್ಟಿದ್ದು ಮಾನವರ ಕಲ್ಯಾಣಕ್ಕಾಗಿ, ಅನಾಗರೀಕತೆಯಿಂದ ಬಾಳುತ್ತಿದ್ದ ಜನರಿಗೆ ಉದಾತ್ತ ಸಂಸ್ಕಾರ ನೀಡಿ, ಸಹೋದರತ್ವ ಭಾವನೆಯನ್ನು ಬೆಳೆಸಲಿಕ್ಕೆ. ಆದರೆ ಒಂದುಗೂಡಿಸಬೇಕಾದ ಧರ್ಮದ ಹೆಸರಿನಲ್ಲಿ ಒಡಕು ಮೂಡಿಸಿಕೊಂಡು ದ್ವೇಷ, ಕ್ರೌರ್ಯಗಳನ್ನು ಪ್ರದರ್ಶಿಸುತ್ತ ಮಾನವ ಹತ್ಯೆಯನ್ನು ನಿರ್ದಯವಾಗಿ ಮಾಡುವ ಭಯೋತ್ಪಾದನೆ ನಿವಾರಣೆಯಾಗಬೇಕು. ಜಗತ್ತಿನಲ್ಲಿ ಶಾಂತಿ ನೆಲೆಗೊಳ್ಳಬೇಕು. ಈ ಉದ್ದೇಶದಿಂದ ಇಂದು ಸಾಮೂಹಿಕ ಪ್ರಾರ್ಥನೆ ಮತ್ತು ಬಸವ ಶಾಂತಿ ಪಾದಯಾತ್ರೆ ಮಾಡಲಾಗಿದೆ ಎಂದು ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಸಮಾವೇಶವಾದ ಜನರನ್ನು ಉದ್ದೇಶಿಸಿ ನುಡಿದರು.

ಬೆಂಗಳೂರು ನಗರದ ಕೋಟೆ ಪ್ರೌಢಶಾಲೆಯ ಮೈದಾನದಿಂದ ಹೊರಟ ಪಾದಯಾತ್ರೆಯ ನೇತೃತ್ವವನ್ನು ಬಸವ ಧರ್ಮಪೀಠಾಧ್ಯಕ್ಷೆ ಮಾತೆ ಮಹಾದೇವಿ, ಜಗನ್ಮಾತಾ ಅಕ್ಕಮಹಾದೇವಿ ಅನುಭ34 ಮಾತೆ ಗಂಗಾದೇವಿ ವಿಶ್ವಕಲ್ಯಾಣ ಮಿಷನ್ನಿನ ಅಲ್ಲಮಪ್ರಭು ಸ್ವಾಮೀಜಿ ಲಿಂಗಾಯತ ಧರ್ಮ ಮಹಾಸಭಾಧ್ಯಕ್ಷ ಎನ್.ಪುಟ್ಟರುದ್ರ ವಹಿಸಿದ್ದರು. ಪಾದಯಾತ್ರೆಯು ಬಸವೇಶ್ವರ ಪುತ್ಥಳಿಯ ಬಳಿ ಕೊನೆಗೊಂಡಿತು.

ವಿಶ್ವವಿಖ್ಯಾತ ಜಾಗತಿಕ ವ್ಯಾಪಾರ ಕೇಂದ್ರಕ್ಕೆ ವಿಮಾನಗಳನ್ನು ಡಿಕ್ಕಿ ಹೊಡಿಸಿ ಮೊದಲನೆಯ ತಪ್ಪನ್ನು ಭಯೋತ್ಪಾದಕರು ಎಸಗಿದರು. ಅಮಾಯಕರಾದ ಸಹಸ್ರಾರು ಜನರು ಆ ದುರಂತದಲ್ಲಿ ಮಡಿದರು. ಭಯೋತ್ಪಾದನೆಯ ನಿವಾರಣೆಗಾಗಿ ಅಮೆರಿಕಾ ಯುದ್ಧ ಸಾರಿದೆ. ಈ ಸಂಘರ್ಷದಲ್ಲಿ ಸಂಕಷ್ಟಕ್ಕೆ ಒಳಗಾಗುವವರು ಸಾಮಾನ್ಯ ಜನ. ಅನೇಕ ಜನರಿಗೆ ಉಣಲು ಅನ್ನ, ಉಡಲು ಬಟ್ಟೆ, ಬಾಳಲು ಆಶ್ರಯ ಇಲ್ಲದಂತಹ ಪರಿಸ್ಥಿತಿಯಲ್ಲಿ ಭಯೋತ್ಪಾದನೆ ಮತ್ತು ಯುದ್ಧಕ್ಕೆ ಕೋಟಿಗಟ್ಟಳೆ ಹಣವು ಅಪವ್ಯಯವಾಗುತ್ತಿದೆ. ಇದು ಮಾನವ ಕುಲಕ್ಕೆ ಮತ್ತು ಸೃಷ್ಟಿಸಿದ ದೇವರಿಗೇ ಮಾಡುವ ಅಪಕಾರ. ಆದ್ದರಿಂದ ಉಭಯತರ ಮನಸ್ಸು ಪರಿವರ್ತನೆಗೊಳ್ಳಲಿ. ವಿಶ್ವದಲ್ಲಿ ಶಾಂತಿ ನೆಲೆಸಲಿ ಎಂದು ಸಂಕಲ್ಪ ಮಾಡುವಾ ಎಂದು ಕರೆಕೊಟ್ಟು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಬಸವಣ್ಣನವರ ಪುತ್ಥಳಿಯ ಬಳಿ ನೂರಾರು ಸಂಖ್ಯೆಯಲ್ಲಿ ನೆರೆದಿದ್ದ ರಾಷ್ಟ್ರೀಯ ಬಸವ ದಳದವರು, " ಧರ್ಮ ಮತ್ತು ದೇವರ ಹೆಸರಿನಲ್ಲಿ ಪ್ರದರ್ಶಿತವಾಗುವ ಮತಾಂಧತೆ, ಜಾತೀಯತೆ, ಮೂಢನಂಬಿಕೆ, ಜೀವಹತ್ಯೆ ಪ್ರಾಣವಧೆ ಮುಂತಾದವುಗಳ ವಿರುದ್ಧ ಜನಜಾಗೃತಿಯ ಆಂದೋಲನದಲ್ಲಿ ಭಾಗಿಯಾಗುತ್ತೇನೆ. ಶಾಂತಿದೂತರಾದ ಬಸವಣ್ಣನವರ ಸಂದೇಶದಂತೆ ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಜಾತಿ ವರ್ಣವರ್ಗರಹಿತ ಧರ್ಮಸಹಿತ ಕಲ್ಯಾಣರಾಜ್ಯ ನಿರ್ಮಾಣಕ್ಕೆ ಶ್ರಮಿಸುತ್ತೇನೆ." ಎಂಬ ಪ್ರತಿಜ್ಞೆಯನ್ನು ಪಾದಯಾತ್ರಿಗಳು ಸ್ವೀಕರಿಸಿದರು. ನೂರಾರು ಮಹಿಳೆಯರು, ಮಕ್ಕಳು ಸಹಿತ ಭಯೋತ್ಪಾದನೆ ನಿಲ್ಲಲಿ, ಶಾಂತಿ ನೆಲೆಸಲಿ ಬೇಕೇ ಬೇಕು ಶಾಂತಿ ಬೇಕು." ಎಂದು ಘೋಷಣೆಗಳನ್ನು ಕೂಗುತ್ತ ಶಾಂತಿಯುತವಾಗಿ ಮೆರವಣಿಗೆಯಲ್ಲಿ ಭಾಗವಹಿಸಿದುದು ಗಮನಾರ್ಹವಾಗಿತ್ತು.

ವರದಿ : ಡಿ. ಶಿವಕುಮಾರ

...ನಿಮ್ಮ ಮೂರ್ತಿಗೊಳಿಸುವೆನಯ್ಯ ಬಸವಣ್ಣ ಅಹಂ ಸೋಹಂ ಎಂಬ ಶಬ್ದವುಳ್ಳನ್ನಕ್ಕ.

ಬೀದರ್ ನಗರದಲ್ಲಿ ಪೂಜ್ಯ ಮಾತಾಜಿಯವರ ಅಭೂತಪೂರ್ವ ಕಾರ್ಯಕ್ರಮಗಳು

ರೇಣುಕಾ ಪದವಿಪೂರ್ವ ಕಾಲೇಜಿನ ನೂತನ ಕಟ್ಟಡದ ಉದ್ಘಾಟನೆ ಮತ್ತು ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಶರಣ. ಪಾಂಡುರಂಗ ಸೂರ್ಯವಂಶಿಯವರ 51ನೆಯ ವರ್ಧಂತಿ ಉತ್ಸವದ ನಿಮಿತ್ತ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬೀದರ್ ನಗರದ ಸಂದರ್ಶನವನ್ನು ಹಮ್ಮಿಕೊಂಡರು. ಬೀದರ್ ಜಿಲ್ಲೆಗೂ ಪೂಜ್ಯ ಮಾತಾಜಿಯವರಿಗೂ ಕರುಳ ಬಳ್ಳಿಯ ಸಂಬಂಧ. ಅವರು ಆಗಮಿಸುತ್ತಾರೆಂದರೆ ಸಾಕು ಬೀದರ್ ಮತ್ತು ಸುತ್ತಲಿನ ಜನಕ್ಕೆ ರೋಮಾಂಚನ ತುಂಬಿ ತುಳುಕುವ ಉತ್ಸಾಹ. ಪೂಜ್ಯ ಮಾತಾಜಿಯವರಿಗೂ ಅಷ್ಟೆ, ಬೀದರ್ ಜಿಲ್ಲೆ ಅವರಿಗೆ ಭಾವನಾತ್ಮಕವಾಗಿ ತವರು. ಪೂಜ್ಯ ಮಾತಾಜಿ ಅಕ್ಟೋಬರ್ 11 ರಂದು ದಲಿತ ಮುಖಂಡರೂ, ಶರಣ ಪಥಿಕರೂ ರಾಜಕೀಯ ನೇತಾರರು ಆದ ಶರಣ ಪಾಡುರಂಗ ಸೂರ್ಯವಂಶಿಯವರ 51ನೆಯ ವರ್ಧಂತಿಗೆ ಆಗಮಿಸುವ ವಿಷಯ ಪ್ರಚಾರವಾಗುತ್ತಲೇ ಬಸವ ಭಕ್ತರ ಹೃದಯದಲ್ಲಿ ಉತ್ಸಾಹದ ಮಿಂಚಿನ ಸಂಚಾರ. ಬೀದರ ನಗರ ಇನ್ನೂ 10 ಕಿಲೋಮೀಟರ ಇರುವಾಗಲೇ ನೂರಾರು ಜನ ಕಾತುರರಾಗಿ ಆಗಮಿಸಿ ನೌಬಾದ್ ಬಳಿಯೇ ಭವ್ಯ ಸ್ವಾಗತ ನೀಡಿದರು. ಕೋಳಾರದಲ್ಲಿ ಅನಾವರಣಗೊಂಡಿದ್ದ ಅಶ್ವಾರೂಢ ಬಸವಣ್ಣನವರ ಪುತ್ಥಳಿ ಬಳಿ ಕರೆದೊಯ್ದು ಮಾಲಾರ್ಪಣೆ ಮಾಡಿಸಿದರು. ಅಲ್ಲಿಂದ ಸಾಲಾಗಿ ಸ್ಕೂಟರ್, ಬೈಕ್‌ಗಳಿಗೆ ಬಸವ ಧ್ವಜ ಕಟ್ಟಿಕೊಂಡು ಕ್ರಮಬದ್ಧರಾಗಿ ಜಯಘೋಷ ಮಾಡುತ್ತ ಸಾಗಿದರು. ಬೀದರ್ ನಗರ ಮಧ್ಯೆ ಇರುವ ಅಶ್ವಾರೂಢ ಬಸವಣ್ಣನವರ ಪುತ್ಥಳಿಗೆ ಪೂಜ್ಯ ಮಾತಾಜಿ ಮಾಲಾರ್ಪಣೆ ಮಾಡಿದ ಬಳಿಕ ಮೆರವಣಿಗೆ ಮುಂದುವರಿಯಿತು.

ಲಿಂಗಾಯತ ಧರ್ಮಜಾಗೃತಿ ಯಾತ್ರೆ ಉದ್ಘಾಟನೆ

ಲಿಂಗಾಯತ ಧರ್ಮದ ವಿಶೇಷತೆ, ಬಸವ ತತ್ತ್ವದ ಮಹತ್ವ ಕುರಿತು ತಿಳಿಸಲು ಈಗಾಗಲೇ ಏಳು ಜನ ಧರ್ಮಪ್ರಚಾರಕ ಸ್ವಾಮೀಜಿಗಳು, ಮಾತಾಜಿಯವರುಗಳು ಬಸವ ಧರ್ಮ ಪೀಠದ ವತಿಯಿಂದ ಸಂಚರಿಸುತ್ತಿದ್ದು, ಬೀದರ್ ಜಿಲ್ಲೆಯಲ್ಲಿ ಧರ್ಮಜಾಗೃತಿ ಮಾಡಲು ದಿ.10-10-2001ರಂದು ಪೂಜ್ಯ ಮಾತಾಜಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಚನ್ನಬಸವರಾಜ ಸ್ವಾಮಿಗಳು ಬೀದರ್ ಜಿಲ್ಲೆಯಲ್ಲಿ ಸಂಚಾರ ಮಾಡಲು ಕಾರ್ಯಕ್ರಮ ರೂಪಿಸಲಾಯಿತು. ಪೂಜ್ಯ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಚನ್ನಯ್ಯ ಸ್ವಾಮಿಗಳ ಸನ್ನಿಧಿಯಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೀದರ್ ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷೆ ಚಂದ್ರಮ್ಮ ಅಣ್ಣಪ್ಪ ಪಾಟೀಲ್ ವಹಿಸಿದರು. ಲಿಂಗಾಯತ ಧರ್ಮ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಶಿವರಾಜ್ ಪಾಟೀಲರು ಪ್ರಾಸ್ತಾವಿಕ ಭಾಷಣ ಮಾಡಿದರು. ಹೈದರಾಬಾದಿನ ಸುಭಾಷ್ ಪಾಟೀಲ್, ವಿಜಯಕುಮಾರ್ ಪಟ್ನೆ, ಜಹಿರಾಬಾದಿನ ಶಂಕರಪ್ಪ ಪಾಟೀಲ್ ಮುಂತಾದವರು, ಮಹಾರಾಷ್ಟ್ರದ ಉದಗೀರ್ ರಾಷ್ಟ್ರೀಯ ಬಸವ ದಳದವರು, ಬೀದರ ಜಿಲ್ಲೆಯ ವಿವಿಧ ರಾಷ್ಟ್ರೀಯ ಬಸವ ದಳಗಳ ಸದಸ್ಯರು ಸಹಸ್ರಾರು ಸಂಖ್ಯೆಯಲ್ಲಿ ಸಮಾವೇಶವಾಗಿದ್ದರು.

ಪಾಂಡುರಂಗ ಸೂರ್ಯವಂಶಿಯವರ ವರ್ಧಂತಿ

ದಿ.11-10-2001ರಂದು ಪೂಜ್ಯ ಮಾತಾಜಿಯವರು ರೇಣುಕಾ ಪದವಿ ಪೂರ್ವ ಕಾಲೇಜಿನ ನೂತನ ಕಟ್ಟಡವನ್ನು ಉದ್ಘಾಟಿಸಿದರು. ಸಂಸತ್ ಸದಸ್ಯರಾದ ಶರಣ. ರಾಮಚಂದ್ರ ವೀರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಸಾಯಿ ಪುಷ್ಪಾಂಜಲಿ ಕಲ್ಯಾಣ ಮಂಟಪದಲ್ಲಿ ಜರುಗಿದ ಪಾಂಡುರಂಗ

ಸೂರ್ಯವಂಶಿಯವರ 51ನೆಯ ವರ್ಧಂತಿ ಉತ್ಸವವನ್ನು ಅರ್ಥಪೂರ್ಣವಾಗಿ ಪೂಜ್ಯ ಮಾತಾಜಿಯವರ ದಿವ್ಯ ಸನ್ನಿಧಿಯಲ್ಲಿ ಆಚರಿಸಲಾಯಿತು. ಪುಷ್ಪವೃಷ್ಟಿ ಮಾಡಿ, ಆರತಿ ಬೆಳಗಿ ಶರಣ. ಸೂರ್ಯವಂಶಿ ದಂಪತಿಗಳನ್ನು ಹರಸಲಾಯಿತು. ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿಯವರ ಸಮ್ಮುಖದಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸತ್ ಸದಸ್ಯರಾದ ರಾಮಚಂದ್ರ ವೀರಪ್ಪನವರು ವಹಿಸಿದ್ದು, ಶರಣ. ಶಂಕರಪ್ಪನವರು ಧ್ವಜಾರೋಹಣ ಮಾಡಿದರು. ಅನೇಕ ರಾಜಕೀಯ ಧುರೀಣರು, ಬೀದರಿನ ಶಾಸಕ ರಮೇಶ್‌ಕುಮಾರ ಪಾಂಡೆಯವರು, ಭಾಲ್ಕಿಯ ಶಾಸಕ ಶರಣ.ಪ್ರಕಾಶ್ ಖಂಡ್ರೆಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸೂರ್ಯವಂಶಿಯವರಿಗೆ ಶುಭಕೋರಿದರು. ರೇಣುಕಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ನಿಜಾಮುದ್ದೀನ್ ಶುದ್ಧ ಕನ್ನಡದಲ್ಲಿ ಸ್ವಾಗತಭಾಷಣ ಮಾಡಿ ಸಭಿಕರನ್ನು ಅಚ್ಚರಿಗೊಳಿಸಿದರು. "ಪಾಂಡುರಂಗ ಸೂರ್ಯವಂಶಿಯವರು ಆದರ್ಶ ರಾಜಕಾರಣಿ ಅವರ ಹುಟ್ಟುಹಬ್ಬಕ್ಕೆ ನಾವೇ ಬಂದು ಶುಭಹಾರೈಸಬೇಕೆಂದು ಆಗ್ರಹ ಮಾಡಿದರು. ಪ್ರಮುಖ ರಾಜಕಾರಣಿಗಳನ್ನು ಕರೆದು ತಮ್ಮ ಸ್ಥಾನಮಾನ ಹೆಚ್ಚಿಸಿ ಕೊಳ್ಳಬೇಕೆಂಬುದಕ್ಕಿಂತ ಗುರುಗಳ ಆಶೀರ್ವಾದ ಮುಖ್ಯ ಎಂಬುದಕ್ಕೆ ಬದ್ಧರಾದವರು. ಉತ್ತಮ ಸಾಮಾಜಿಕ, ರಾಜಕೀಯ ನೇತಾರರು. ಗಣಪತಿ ಅಂದರೆ ಸಮುದಾಯ ನಾಯಕ mass leader. ಅವನಿಗೆ ಇರಬೇಕಾದುದು ಸ್ವತಂತ್ರ ಬುದ್ಧಿ ಮತ್ತು ವಾಕ್ಸಿದ್ಧಿ. ಈ ಎರಡೂ ದೃಷ್ಟಿಯಿಂದ ಶರಣ. ಪಾಂಡುರಂಗ ಅವರು ಸಮರ್ಥನಾಯಕ. ಇವರು ರಾಷ್ಟ್ರಮಟ್ಟದ ರಾಜಕಾರಣಕ್ಕೆ ಹೋಗಬೇಕೆಂದು ನಮ್ಮ ಅಪೇಕ್ಷೆ. ಇದರಲ್ಲಿ ನಮಗೆ ಸ್ವಾರ್ಥವೂ ಇದೆ. ಆ ಸ್ವಾರ್ಥ ಏನೆಂದರೆ ಪಾಂಡುರಂಗ ಸೂರ್ಯವಂಶಿ ಕ್ರಾಂತಿಪುರುಷ ಬಸವಣ್ಣನವರ ಜೀವನ, ಸಾಧನೆ, ಸಂದೇಶದ ಬಗ್ಗೆ ತಿಳಿದವರು ಮಾತ್ರವಲ್ಲ, ಬಸವಾಭಿಮಾನಿಗಳು ಜೊತೆಗೆ ಕನ್ನಡ, ಹಿಂದಿ, ಮರಾಠಿ ಮುಂತಾದ ಭಾಷೆಗಳಲ್ಲಿ ಅದ್ಭುತವಾಗಿ ಮಾತನಾಡಬಲ್ಲ ವಾಗ್ಮಿ. ಬೀದರ ನಾಡು ಜಗತ್ತಿಗೆ ಮೊಟ್ಟ ಮೊದಲನೆಯದಾಗಿ ಸಮಾಜವಾದವನ್ನು, ಭಾರತದಲ್ಲಿ ಮೊಟ್ಟ ಮೊದಲಿಗೆ ಜಾತ್ಯತೀತತೆ ಸಮತಾವಾದವನ್ನು ಕಲ್ಯಾಣದ ಕ್ರಾಂತಿಭೂಮಿಯಿಂದ ಬಿತ್ತರಿಸಿದ ನಾಡು.

ಇದನ್ನು ಸೂರ್ಯವಂಶಿಯವರು ತಿಳಿಸಬಲ್ಲ ಸಾಮರ್ಥ್ಯವಿರುವವರು ಆದ್ದರಿಂದ ಅವರು ಕೇವಲ ಸ್ಥಳೀಯ ನೇತಾರರಷ್ಟೆ ಆಗಿರದೆ ರಾಷ್ಟ್ರಮಟ್ಟಕ್ಕೆ ಹೋಗಬೇಕೆಂದು ನಮ್ಮ ಅಭಿಲಾಶೆ" ಎಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ನುಡಿದರು.

ಗಾಂಧಿನಗರ-ಪ್ರವಚನ ಮುಕ್ತಾಯ ಸಮಾರಂಭ

ಶ್ರಾವಣ ಮಾಸದ ಪ್ರವಚನವನ್ನು ನಗರ ಮಧ್ಯದಲ್ಲಿರುವ ಬಸವ ಮಂಟಪದಲ್ಲಿ ಮಾಡಿದ ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿಯವರು ಬೀದರ ನಗರದ ವಿವಿಧ ಬಡಾವಣೆಗಳಲ್ಲಿ ಪ್ರವಚನ ಮಾಡುತ್ತಿದ್ದು ದಿ.12-10-2001ರಂದು ಗಾಂಧಿ ನಗರದ ಪ್ರವಚನದ ಮುಕ್ತಾಯ ಸಮಾರಂಭ ಏರ್ಪಡಿಸಲಾಗಿದ್ದಿತು. ನೆತ್ತಿಯ ಮೇಲೆ ಸುಡುವ ಬಿಸಿಲು ಇದ್ದರೂ ಸಾವಿರಾರು ಜನ ರಸ್ತೆಗಳಲ್ಲಿ ನಿಂತು ಕಾಯುತ್ತ ಪೂಜ್ಯ ಮಾತಾಜಿಯವರನ್ನು ಸ್ವಾಗತಿಸಿದರು. ಕಾರ್ಯಕ್ರಮವನ್ನು ಬೀದರ್ ಶಾಸಕ ಶರಣ. ರಮೇಶ್‌ಕುಮಾರ ಪಾಂಡೆ ಉದ್ಘಾಟಿಸಿದರು. ರಾಜಕೀಯ ಮತ್ತು ಧಾರ್ಮಿಕ ನೇತಾರರಾದ ಬಸವರಾಜ ರಾಜೋಳಿ ಧ್ವಜಾರೋಹಣ ಮಾಡಿದರು. ನಗರಪಾಲಿಕೆ ಸದಸ್ಯ ಶರಣ. ಠಾಕೂರ್ ಮುಖ್ಯ ಅತಿಥಿಗಳಾಗಿದ್ದರು. ಬೀದರ್ ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷೆ ಚಂದ್ರಮ್ಮ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಅನೇಕ ದಾನಿಗಳನ್ನು ಗಣ್ಯರನ್ನು ಶಾಲು ಹೊದ್ದಿಸಿ ಸತ್ಕರಿಸಲಾಯಿತು. ಪೂಜ್ಯ ಮಾತಾಜಿಯವರು ಸಂಕ್ಷಿಪ್ತ ಪ್ರಾರ್ಥನೆ ಮಾಡಿಸಿ, ಪ್ರವಚನ ನೀಡಿದರು.

-ವರದಿ : ನಾಗಶೆಟ್ಟಿ ಶೆಟಕಾರ, ಬೀದರ್

ಹುಬ್ಬಳ್ಳಿಯಲ್ಲಿ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಚಟುವಟಿಕೆ

ಹುಬ್ಬಳ್ಳಿಯ ಉಣಕಲ್‌ನಲ್ಲಿ ಬಸವ ಧರ್ಮಪೀಠದ, ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಹೆಸರಿನಲ್ಲಿ ಬಸವ ಮಂಟಪ ಇತ್ಯಾದಿ ನಿರ್ಮಿಸುವ ಸಲುವಾಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನವನ್ನು ಖರೀದಿಸಿದ್ದು, ದಿನಾಂಕ 30-09-2001 ರಂದು ಅಲ್ಲಿ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಹುಬ್ಬಳ್ಳಿ-ಧಾರವಾಡ ಬಸವ ದಳಗಳ ಶರಣೆಯರು ಶ್ರೀ ಬಸವೇಶ್ವರ ಪೂಜೆಯನ್ನು ಮಾಡಿದರು. ನಂತರ ನಡೆದ ಸಾಮೂಹಿಕ ಪ್ರಾರ್ಥನೆಯ ನೇತೃತ್ವವನ್ನು ಶರಣೆ ಶೋಭಾದೇವಿ ಪರಮಾದಿ ವಹಿಸಿದ್ದರು. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ ಗಣ್ಯ ವ್ಯಾಪಾರಸ್ಥರೂ ಆದ ಶರಣ. ಮೂರುಸಾವಿರಪ್ಪ ಸಂಗಪ್ಪ ಕೊರವಿ ಅವರು ಬಸವ ಧ್ವಜಾರೋಹಣವನ್ನು ಮಾಡಿ ಮಾತನಾಡುತ್ತ ಪ್ರತಿಯೊಬ್ಬರೂ ಸಮಾಜದ ಋಣ ತೀರಿಸುವದಕ್ಕಾಗಿ ಸಮಾಜದ ಸೇವೆಯನ್ನು ಮಾಡಬೇಕೆಂದು ಹೇಳಿ, ತಾವು ಕೊನೆಯ ತನಕ ಶ್ರೀ ಗುರು ಬಸವಣ್ಣನವರ ಸೇವೆಗಾಗಿ ದುಡಿಯ ಬಯಸಿದ್ದಾಗಿ ತಿಳಿಸಿದರು. ಗಣನಾಯಕರಾದ ಶರಣ. ಬಿ.ಜಿ. ಹೊಸಗೌಡರು ಮಾತನಾಡಿ ಹುಬ್ಬಳ್ಳಿಯಲ್ಲಿ ನಿವೇಶನ ಪಡೆಯಲು ಮಾಡಿದ ಪ್ರಯತ್ನಗಳನ್ನು ಹಾಗೂ ಮುಂದಿನ ಯೋಜನೆಗಳನ್ನು ವಿವರಿಸಿದರು. ಜನಪ್ರಿಯ ಯುವ ಮುಂದಾಳುಗಳೂ, ಹುಬ್ಬಳ್ಳಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷರೂ ಆದ ಶರಣ. ಜಗದೀಶಗೌಡ ಪಾಟೀಲರನ್ನು ಟ್ರಸ್ಟಿನ ಪರವಾಗಿ ಶರಣ. ಲಿಂಗರಾಜ ಇಂಗಳಹಳ್ಳಿ ಶಾಲು ಹೊದಿಸಿ ಸತ್ಕರಿಸಿದರು. ಶರಣ. ಜಗದೀಶಗೌಡ ಪಾಟೀಲರು ಮಾತನಾಡಿ ಧರ್ಮಪಿತ ಬಸವಣ್ಣನವರು ಕೊಟ್ಟ ಕಾಯಕವೇ ಕೈಲಾಸ, ಕಳಬೇಡ, ಕೊಲಬೇಡ ಮುಂತಾದ ಸಂದೇಶಗಳನ್ನು ಅಳವಡಿಸಿಕೊಳ್ಳುವದರಿಂದ ವ್ಯಕ್ತಿ ಹಾಗೂ ಸಮಾಜಗಳ ಏಳ್ಗೆ ಯಾಗುವದೆಂದು ಹೇಳಿದರು.

ಉಣಕಲ್ಲಿನ ಗಣ್ಯರಾದ ಶರಣ. ಫಕೀರಪ್ಪ ಸವದಿ ಮತ್ತು ಶರಣ ಮಹಾದೇವಪ್ಪ ಮೆಣಸಿನಕಾಯಿ ಬಸವ ಮಂಟಪದ ನಾಮಫಲಕಗಳನ್ನು ಅನಾವರಣ ಮಾಡಿದರು. ಬಸವ ಮಹಾಮನೆ ಚಾರಿಟೇಬಲ್ ಟ್ರಸ್ಟ್ ಹುಬ್ಬಳ್ಳಿ ಶಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶರಣ ಕಲ್ಯಾಣಪ್ಪ ಪರಮಾದಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ವ್ಯಕ್ತಿ - ವ್ಯಕ್ತಿಗಳಲ್ಲಿ ಯಾವುದೇ ತಾರತಮ್ಯ ಮಾಡದೆ, ಎಲ್ಲರ ಒಳ್ಳಿತಿಗಾಗಿ ತಮ್ಮ ಸಂಸ್ಥೆ ಕಾರ್ಯ ಮಾಡುವುದೆಂದು ತಿಳಿಸಿದರು.

ವೇದಿಕೆಯ ಮೇಲೆ ಧಾರವಾಡ ಜಿಲ್ಲಾ ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷ ಶರಣ. ಎಸ್. ಎಲ್. ಗೌಡರ, ರಾಷ್ಟ್ರೀಯ ಬಸವದಳ ಧಾರವಾಡ ಅಧ್ಯಕ್ಷ ಶರಣ. ಶಿವಣ್ಣ ಶಿರೂರ, ಶರಣ. ಎಸ್. ಎಫ್. ಹುನಗುಂದ, ಶರಣೆ. ಜಯಶ್ರೀ ಜಗದೀಶಗೌಡ ಪಾಟೀಲ್ ಉಪಸ್ಥಿತರಿದ್ದರು. ಶರಣ. ಎಸ್.ವಿ. ನರಗುಂದ ಮಾಲಾರ್ಪಣೆ ಮಾಡಿದರು. ಶರಣ. ಬಿ. ಬಿ. ಕೊಟ್ಟೂರ ಶೆಟ್ಟರ ಅತಿಥಿಗಳಿಗೆ ಧರ್ಮಪಿತ ಬಸವೇಶ್ವರರ ಭಾವಚಿತ್ರಗಳನ್ನು ಕೊಟ್ಟರು. ಶರಣ. ಶ್ರೀಶೈಲ ತುಂಗಳ ಸಭಾನಿರ್ವಹಣೆ ಮಾಡಿದರು. ಶರಣರಾದ ಬಿ.ಬಿ. ಲಕ್ಷ್ಮೇಶ್ವರ, ಎಫ್.ಕೆ. ಬಣಕಾರ, ಎಮ್.ಡಿ. ತಡಸ, ಜೆ.ಸಿ. ಅಣ್ಣಿಗೇರಿ, ಬಸಯ್ಯ ಗಣಾಚಾರಿ, ವಿನಯ ಪರಮಾದಿ, ವೀರೂ ಮರಿಗೌಡರ ಪ್ರಸಾದ ಮತ್ತಿತರ ವ್ಯವಸ್ಥೆಗಳನ್ನು ಮಾಡಿದರು.

ಇತ್ತೀಚೆಗೆ ಅಮೇರಿಕದಲ್ಲಿ ಉಗ್ರರ ದಾಳಿಯಿಂದ ಹತರಾದ ಹಾಗೂ ಕಾಶ್ಮೀರದಲ್ಲಿ ಉಗ್ರರ ದಾಳಿಗಳಿಂದ ಮೃತರಾದ ನಾಗರೀಕರ ಗೌರವಾರ್ಥ ಸಭೆಯು 2 ನಿಮಿಷ ಮೌನವಾಚರಿಸಿ ಮೃತರ ಆತ್ಮಶಾಂತಿಗಾಗಿ ಪ್ರಾರ್ಥಿಸಿತು.


- ಕಲ್ಯಾಣಪ್ಪ ಪರಮಾದಿ, ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ.




ಸಾಮೂಹಿಕ ಇಷ್ಟಲಿಂಗ ಪೂಜೆಗೆ ಆಗಮಿಸುತ್ತಿರುವ ಪೂಜ್ಯ ಮಾತಾಜಿಯವರಿಗೆ ಶರಣ-ಶರಣೆಯರಿಂದ ಸ್ವಾಗತ



ಬಸವ ಧ್ವಜಾರೋಹಣ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ.



ಧ್ವಜಾರೋಹಣದಲ್ಲಿ ಭಾಗಿಗಳಾದ ಶರಣ-ಶರಣೆಯರು



ಧ್ವಜಾರೋಹಣದಲ್ಲಿ ಭಾಗಿಗಳಾದ ಶರಣ-ಶರಣೆಯರು



ಸ್ವಾಗತ ಭಾಷಣ ಮಾಡುತ್ತಿರುವ ಲಿಂಗಾಯತ ಧರ್ಮ ಮಹಾಸಭಾಧ್ಯಕ್ಷ ಶರಣ. ಎನ್.ಪುಟ್ಟರುದ,



ಪ್ರಾರ್ಥನೆ ಮಾಡುತ್ತಿರುವ ಗಣನಾಯಕಿ ಶರಣೆ ದೇವಿಕಾ ಶರಣಪ್ಪ




ಸಭಾ ನಿರ್ವಹಣೆ ಮಾಡುತ್ತಿರುವ ಡಿ.ಶಿವಕುಮಾರ್ ಎಡಪಕ್ಕದಲ್ಲಿ ಬಿ.ಆರ್.ಸುಬ್ರಹ್ಮಣ್ಯ, ಬಲಪಕ್ಕದಲ್ಲಿ ತಮಿಳುನಾಡಿನ ಆರ್. ಚಂದ್ರಶೇಖರ್



ಸುಧಾ ನಾಗರಾಜ್ ತಂಡದವರಿಂದ ಬಸವ ಸ್ತೋತ್ರ ನೃತ್ಯಾಭಿನಯ



ಶರಣ ಸಂಗಮ-ವಾರದ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಗಳಾದ ಶರಣೆಯರ ಸಮೂಹ



ಉದ್ಘಾಟನಾ ಭಾಷಣ ಮಾಡುತ್ತಿರುವ ಬೆಲ್ಜಿಯಂ ದೇಶದ ಜೀನ್ ಲೆಪರ್ಟ್



"ಬಸವೇಶ್ವರ ಪೂಜಾವ್ರತ" ಪುಸ್ತಕ ಬಿಡುಗಡೆ ಮಾಡುತ್ತಿರುವ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಮಾತಾಜಿ, ದಾಸಿಗಳಾದ ಹೆಚ್.ಪಿ.ರಾಜಣ್ಣ




2002ನೆಯ ಇಸವಿಯ ಕ್ಯಾಲೆಂಡರ್ ಕಾರ್ಡ್ ಬಿಡುಗಡೆ ಮಾಡುತ್ತಿರುವ ಹೆಚ್.ಎಸ್.ಚನ್ನಬಸವಣ್ಣ



ಇಷ್ಟಲಿಂಗ ಪ್ರಾತ್ಯಕ್ಷಿಕೆ ಪೂಜ್ಯ ಮಾತಾಜಿಯವರಿಂದ



ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ತನ್ಮಯರಾಗಿರುವ ಶರಣೆಯರ ಸಮೂಹ



ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ಗಣ ನಾಯಕಿಯರು ಮತ್ತು ಗಣಾಚಾರ ದಳದ ಶರಣರು




ಪೂಜಾ ನಿರತ ಶರಣ ಸಮೂಹ



ಜಪ-ತ್ರಾಟಕ ಯೋಗ ನಿರತ ಶರಣ ಸಮೂಹ




ಪೂಜ್ಯ ಮಾತೆ ಗಂಗಾದೇವಿಯವರಿಂದ ಭಾಷಣ



ಎಡದಿಂದ ಬಲಕ್ಕೆ ಸನ್ನಿಧಿ ವಹಿಸಿದ್ದ ಪೂಜ್ಯ ಚನ್ನಬಸವರಾಜ ಸ್ವಾಮೀಜಿ, ಅಲ್ಲಮಪ್ರಭು ಸ್ವಾಮೀಜಿ, ಪೂಜ್ಯ ಮಾತೆ ಗಂಗಾದೇವಿ, ಪೂಜ್ಯ ಮಾತಾಜಿ



ಬಸವ ತತ್ತ್ವ ಸಮಾವೇಶ ಎಡದಿಂದ ಬಲಕ್ಕೆ ಚನ್ನಬಸವರಾಜ ಸ್ವಾಮೀಜಿ, ಅಲ್ಲಮಪ್ರಭು ಸ್ವಾಮೀಜಿ,
ಪೂಜ್ಯ ಮಾತೆ ಗಂಗಾದೇವಿ, ಪೂಜ್ಯ ಮಾತಾಜಿ,
ಪಾಕೆಟ್ ಕ್ಯಾಲೆಂಡರ್ ಬಿಡುಗಡೆ ಮಾಡುತ್ತಿರುವ ಡಾ|| ಎಂ.ಸಿ. ಮೋದಿ, ಡಾ|| ಸಿ. ವೀರಪ್ಪ



ಡಾ|| ಸಿ. ವೀರಪ್ಪನವರಿಂದ ಭಾಷಣ



ವಿಶ್ವಶಾಂತಿಗಾಗಿ ಬಸವ ಭಾವಚಿತ್ರ, ಮೆರವಣಿಗೆ ಮತ್ತು ಪಾದಯಾತ್ರೆ



ಸುಮಂಗಲಿ ಸೇವಾಶ್ರಮದ ಮಕ್ಕಳಿಂದ ಮೆರವಣಿಗೆಯಲ್ಲಿ ಬ್ಯಾಂಡ್ ವಾದನ



ಬೆಂಗಳೂರು ಸಿಟಿ ಮಾರುಕಟ್ಟೆ ದಾಟಿ, ಅವೆನ್ಯೂ ರಸ್ತೆ ಪ್ರವೇಶಿಸುತ್ತಿರುವ ಶರಣ ಸಮೂಹ



ಶರಣ ಶರಣೆಯರಿಂದ ಪಥ ಸಂಚಲನ



ಪಾದಯಾತ್ರೆಯಲ್ಲಿ ಪೂಜ್ಯ ಮಾತಾಜಿ ಮತ್ತು ಪೂಜ್ಯ ಮಾತೆ ಗಂಗಾದೇವಿ



ಪಾದಯಾತ್ರೆಯಲ್ಲಿ ಪೂಜ್ಯ ಮಾತಾಜಿ ಮತ್ತು ಪೂಜ್ಯ ಮಾತೆ ಗಂಗಾದೇವಿ




ಪಾದಯಾತ್ರೆಯಲ್ಲಿ ಪೂಜ್ಯ ಮಾತಾಜಿ ಮತ್ತು ಪೂಜ್ಯ ಮಾತೆ ಗಂಗಾದೇವಿ




ಬಸವೇಶ್ವರ ಪುತ್ಥಳಿಯ ಬಳಿ ಶರಣ ಸಮೂಹ



ಬಸವ ತತ್ತ್ವ ತರಬೇತಿ ಕಮ್ಮಟದಲ್ಲಿ ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ ಮತ್ತು ತ್ರಾಟಕಯೋಗ ಸಾಧನೆ



ಪೂಜ್ಯ ಅಲ್ಲಮಪ್ರಭು ಸ್ವಾಮಿಗಳಿಂದ ಇಷ್ಟಲಿಂಗ ದೀಕ್ಷೆ



ಎಡದಿಂದ ಬಲಕ್ಕೆ ಮಹಾದೇವಪ್ಪ ಮೆಣಸಿನಕಾಯಿ, ಫಕೀರಪ್ಪ ಸವದಿ, ಕಲ್ಯಾಣಪ್ಪ ಪರಮಾದಿ, ಮೂರುಸಾವಿರಪ್ಪ ಕೊರವಿ, ಜಗದೀಶಗೌಡ ಪಾಟೀಲ, ಜಯಶ್ರೀ ಪಾಟೀಲ, ಎಸ್.ಎಫ್.ಹುನಗುಂದ, [illegible] ಗೌಡರು, ಬಿ.ಜಿ.ತೋಟಗೌಡರು




ಬಸವ ಮಂಟಪದ ಶಂಕುಸ್ಥಾಪನೆಯ ದಿನ ಹುಬ್ಬಳ್ಳಿಯ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಶರಣ ಜಗದೀಶಗೌಡ ಪಾಟೀಲರನ್ನು ಸತ್ಕರಿಸಲಾಯಿತು. ಚಿತ್ರದಲ್ಲಿ ಕಲ್ಯಾಣಪ್ಪ ಪರಮಾದಿ, ಮೂರುಸಾವಿರಪ್ಪ ಕೊರವಿ, ಎಸ್.ಎಫ್.ಹುನಗುಂದ, ಶಿವಣ್ಣ ಶಿರೂರ, ಜಗದೀಶಗೌಡ ಪಾಟೀಲರನ್ನು ಲಿಂಗರಾಜ ಇಂಗಳಳ್ಳಿ ನೆನಪಿನ ಕಾಣಿಕೆ ಕೊಟ್ಟು ಶಾಲು ಹೊದ್ದಿಸಿ ಸತ್ಕರಿಸಲಾಯಿತು.



ರೇಣುಕಾ ಪದವಿಪೂರ್ವ ಕಾಲೇಜಿನ ನೂತನ ಕಟ್ಟಡದ ಉದ್ಘಾಟನೆ ಮಾಡಿಸಲು ದಿ.11-10-2001ರಂದು ಆಗಮಿಸುತ್ತಿರುವ ಪೂಜ್ಯ ಮಾತಾಜಿಯವರನ್ನು ವಿದ್ಯಾಸಂಸ್ಥೆಯ ಅಧ್ಯಕ್ಷ ಪಾಂಡುರಂಗ ಸೂರ್ಯವಂಶಿ ಮತ್ತು ಪ್ರಿನ್ಸಿಪಾಲ್ ನಿಜಾಮುದ್ದೀನ್ ಸ್ವಾಗತಿಸುತ್ತಿದ್ದಾರೆ.



ಶ್ರೀ ಪಾಂಡುರಂಗ ಸೂರ್ಯವಂಶಿಯವರ 51ನೆಯ ಹುಟ್ಟುಹಬ್ಬದ ಸಮಾರಂಭವನ್ನು ಉದ್ಘಾಟಿಸುತ್ತಿರುವ ಪೂಜ್ಯ ಮಾತಾಜಿಯವರು. ಎಡಗಡೆಗೆ ಪೂಜ್ಯ ಚನ್ನಬಸವರಾಜ ಸ್ವಾಮಿಗಳು, ಬಲಗಡೆಗೆ ಸಂಸತ್ ಸದಸ್ಯರಾದ ರಾಮಚಂದ್ರ ವೀರಪ್ಪನವರು.



ದಿ.10-10-2001 ಬೀದರ ಬಸವ ಮಂಟಪದಲ್ಲಿ ಲಿಂಗಾಯತ ಧರ್ಮಜಾಗೃತಿ ಯಾತ್ರೆಯ ಉದ್ಘಾಟನಾ ಸಭೆ ಎಡದಿಂದ ಬಲಕ್ಕೆ ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಹೈದರಾಬಾದಿನ ವಿಜಯಕುಮಾರ್ ಪಟ್ನೆ, ಪೂಜ್ಯ ಮಾತಾಜಿ, ಪೂಜ್ಯ ಚನ್ನಯ್ಯ ಸ್ವಾಮಿಗಳು.




ದಿ. 12-10-2001ರಂದು ಬೀದರಿನ ಗಾಂಧಿನಗರದಲ್ಲಿ ನಡೆದ ಚನ್ನಬಸವರಾಜ ಸ್ವಾಮಿಗಳ ಪ್ರವಚನದ ಮುಕ್ತಾಯಕ್ಕೆ ಆಗಮಿಸಿದ ಪೂಜ್ಯ ಮಾತಾಜಿಯವರಿಗೆ ಭವ್ಯ ಸ್ವಾಗತ ಕೋರುತ್ತಿರುವ ಜನ ಸಮೂಹ.




ಬಸವ ಗಂಗೋತ್ರಿಯಲ್ಲಿ ದಿ.14-10-2001ರಿಂದ 27-10-2001ರ ವರೆಗೆ ನಡೆದ ತರಬೇತಿ ಕಮ್ಮಟದಲ್ಲಿ ಶಿಬಿರಾರ್ಥಿಗಳು



ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮಿಗಳಿಂದ ಶರಣ-ಶರಣೆಯರಿಗೆ ಕ್ರಿಯಾಮೂರ್ತಿ ದೀಕ್ಷೆ



ದಿ.26-10-2001ರಂದು ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮಿಗಳ 41ನೆಯ ವರ್ಧಂತಿ



ಪೂಜ್ಯ ಮಾತಾಜಿಯವರಿಂದ ಪೂಜ್ಯ ಅಲ್ಲಮಪ್ರಭು ಸ್ವಾಮಿಗಳಿಗೆ 41ನೆಯ ವರ್ಧಂತಿ ನಿಮಿತ್ತ ಆಶೀರ್ವಾದ



ದಿ. 12-10-2001ರಂದು ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳ ಗಾಂಧಿನಗರ ಪ್ರವಚನದ ಮುಕ್ತಾಯ್ಯ ಸಮಾರಂಭ ಎಡದಿಂದ ಬಲಕ್ಕೆ ಬಾಬೂಸಿಂಗ್ ಠಾಕೂರ್, ಬಸವರಾಜ್ ರಾಜೋಳ, ಕಾರ್ಯಕ್ರಮ ಉದ್ಘಾಟಿಸುತ್ತಿರುವ ರಮೇಶ ಪಾಂಡೆ ಬೀದರ ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷೆ ಚಂದ್ರಮ್ಮ ಪಾಟೀಲ್ ಸಾನಿಧ್ಯ ವಹಿಸಿದ ಪೂಜ್ಯ ಮಾತಾಜಿ, ಚನಬಸವರಾಜ ಸ್ವಾಮಿಗಳು

ಕಲ್ಯಾಣ ಕಿರಣ CPMG/KA/BGW-50 ನವೆಂಬರ್ - 2001
R.NO 19980/70 WPP (W) -17



ಬಸವ ತತ್ತ್ವ ಸಮಾವೇಶ. ಎಡದಿಂದ ಬಲಕ್ಕೆ -ಅಲ್ಲಮ ಪ್ರಭು ಸ್ವಾಮಿಗಳು, ಪೂಜ್ಯ ಮಾತೆ ಗಂಗಾದೇವಿ, ಪೂಜ್ಯ ಶ್ರೀ ಮಾತಾಜಿ, ಡಾ|| ಮೋದಿ, ಡಾ|| ವೀರಪ್ಪ, ಡಾ|| ಜೇನ್ ಲೆಷರ್ಟ್, ಪಿ.ಆರ್.ಸುಬ್ರಹ್ಮಣ್ಯ